ಸಂಪುಟ 01 | ಸಂಚಿಕೆ 112 | ಮಂಗಳವಾರ 10 ಮಾರ್ಚ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

MA ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ, ಗದಗ, ವಿಜಯನಗರ, ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಸಿಐಎಸ್‌ಎಫ್ ರೈಸಿಂಗ್ ಡೇ**

ಕೇಂದ್ರ ಕೈಗಾರಿಕಾ ಭದ್ರತಾ ಪಡೆ (CISF) ರೈಸಿಂಗ್ ಡೇ (ಸ್ಥಾಪನಾ ದಿನ) ಅನ್ನು ಪ್ರತಿ ವರ್ಷ ಮಾರ್ಚ್ 10 ರಂದು ಆಚರಿಸಲಾಗುತ್ತದೆ. 1969 ರಲ್ಲಿ ಸ್ಥಾಪನೆಯಾದ ಈ ಪಡೆ, ದೇಶದ ಪ್ರಮುಖ ಮೂಲಸೌಕರ್ಯಗಳು, ವಿಮಾನ ನಿಲ್ದಾಣಗಳು ಮತ್ತು ಕೈಗಾರಿಕಾ ಘಟಕಗಳಿಗೆ ಭದ್ರತೆ ಒದಗಿಸುತ್ತದೆ. 2025 ರಲ್ಲಿ, ಅಖಖಈ ತನ್ನ 56ನೇ ರೈಸಿಂಗ್ ಡೇ ಅನ್ನು ಆಚರಿಸುತ್ತಿದೆ.

**2) ಶಬರಿ ಜಯಂತಿ**

ಶಬರಿ ಜಯಂತಿಯು ಭಗವಾನ್ ರಾಮನ ಪರಮ ಭಕ್ತೆ ಮಾತಾ ಶಬರಿಯ ಜನ್ಮದಿನವನ್ನು ಆಚರಿಸುವ ಪವಿತ್ರ ದಿನವಾಗಿದೆ, ಇದನ್ನು ಸಾಮಾನ್ಯವಾಗಿ ಪ್ರತಿ ವರ್ಷ ಫಾಲ್ಗುಣ ಮಾಸದ ಕೃಷ್ಣ ಪಕ್ಷದ ಸಪ್ತಮಿಯಂದು ಆಚರಿಸಲಾಗುತ್ತದೆ.

**3) ಸಾವಿತ್ರಿ ಬಾಯಿ ಫುಲೆ ಪುಣ್ಯ ಸ್ಮರಣೆ**

ಭಾರತದ ಮೊದಲ ಮಹಿಳಾ ಶಿಕ್ಷಕಿ, ಸಮಾಜ ಸುಧಾರಕಿ ಮತ್ತು ಕ್ರಾಂತಿಕಾರಿ ಶಿಕ್ಷಣತಜ್ಞೆ ಸಾವಿತ್ರಿಬಾಯಿ ಫುಲೆ (3 ಜನವರಿ 1831 – 10 ಮಾರ್ಚ್ 1897) ಅವರು ಮಾರ್ಚ್ 10, 1897 ರಂದು ಪ್ಲೇಗ್ ಪೀಡಿತರಿಗೆ ಚಿಕಿತ್ಸೆ ನೀಡುವಾಗ ಸೋಂಕಿಗೆ ತುತ್ತಾಗಿ ನಿಧನರಾದರು. ಅವರು ಮಹಿಳಾ ಶಿಕ್ಷಣ, ಜಾತಿ ಪದ್ಧತಿ ನಿರ್ಮೂಲನೆ ಮತ್ತು ಶೋಷಿತರ ಹಕ್ಕುಗಳಿಗಾಗಿ ಹೋರಾಡಿದ ಮಹಾನ್ ಚೇತನ.

## ಸುಭಾಷಿತ

ಅನುಭವವು ಜಗತ್ತಿನ ಸರ್ವಶ್ರೇಷ್ಠ ಶಿಕ್ಷಕ. ಉಸಿರಿರುವವರೆಗೂ ಕಲಿಕೆ, ಜ್ಞಾನಾರ್ಜನೆಯೇ ಜೀವನದ ಗುರಿಯಾಗಿರಲಿ.

ಸ್ವಾಮಿ ವಿವೇಕಾನಂದ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು

# ಭಾರತೀಯರ ಸುರಕ್ಷತೆಯೇ ನಮ್ಮ ಆದ್ಯತೆ :ಜೈಶಂಕರ್

**ನೈಜ್ಯ ದೆಸೆ ನ್ಯೂಸ್**

ನವದೆಹಲಿ: ಉಲ್ಬಣಗೊಳ್ಳು ತ್ತಿರುವ ಪಶ್ಚಿಮ ಏಷ್ಯಾ ಸಂಘರ್ಷದ ಬಗ್ಗೆ ರಾಜ್ಯ ಸಭೆಯಲ್ಲಿ ಮಾತನಾಡಿರುವ ವಿದೇಶಾಂಗ ಸಚಿವ ಜೈಶಂಕರ್ ಅವರು, ಭಾರತವು ಶಾಂತಿ ಮತ್ತು ಸಂವಾದ ಮತ್ತು ರಾಜತಾಂತ್ರಿಕತೆಗೆ ಮರಳಲು ಒಲವು ತೋರುತ್ತಿದೆ ಎಂದಿದ್ದಾರೆ.

ರಾಜ್ಯಸಭೆಯಲ್ಲಿ ಸಂಘರ್ಷದ ಕುರಿತು ಸ್ವಯಂಪ್ರೇರಿತ ಹೇಳಿಕೆ ನೀಡಿದ ಅವರು, ಈ ಪ್ರದೇಶದಲ್ಲಿನ ಭಾರತೀಯ ಸಮುದಾಯದ ಯೋಗಕ್ಷೇಮ ಮತ್ತು ಸುರಕ್ಷತೆಯು ಸರ್ಕಾರದ ಆದ್ಯತೆಯಾಗಿದೆ ಎಂದು ಹೇಳಿದರು.ನಾವು ಕೊನೆಯವರೆಗೂ ಈ ಪ್ರದೇಶದ ಸರ್ಕಾರಗಳೊಂದಿಗೆ ಕೆಲಸ ಮಾಡುವುದನ್ನು ಮುಂದುವರಿಸುತ್ತೇವೆ ಎಂದು ಅವರು ಹೇಳಿದರು.



ಇಂಧನ ಭದ್ರತೆ ಮತ್ತು ವ್ಯಾಪಾರ ಗುರಿಗಳು ಸೇರಿದಂತೆ ನಮ್ಮ ರಾಷ್ಟ್ರೀಯ ಹಿತಾಸಕ್ತಿ ಯಾವಾಗಲೂ ಅತ್ಯುನ್ನತವಾಗಿರುತ್ತದೆ. ಅಮೆರಿಕ ಮತ್ತು ಇಸ್ರೇಲ್ ಇರಾನ್ ಮೇಲೆ ದಾಳಿ ಮಾಡಿದಾಗ ಮತ್ತು ನೆರೆಯ ಪ್ರದೇಶಗಳಲ್ಲಿನ ಯುಎಸ್ ನೆಲೆಗಳ ಮೇಲೆ ಹಾಗೂ ಇಸ್ರೇಲ್ ಮೇಲೆ ದಾಳಿ ಮಾಡುವ ಮೂಲಕ ಟೆಹ್ರಾನ್ ಪುನರುಚ್ಚರಿಸಿದಾಗ ಭುಗಿಲೆದ್ದ ಸಂಘರ್ಷದ ನಂತರ ಇಂಧನ ಬೆಲೆಗಳಲ್ಲಿನ ಏರಿಕೆಯ ಕುರಿತು ಅವರು,

ಇಂಧನ ಮಾರುಕಟ್ಟೆಗಳ ಲಭ್ಯತೆ, ವೆಚ್ಚಗಳು ಮತ್ತು ಅಪಾಯಗಳನ್ನು ಸಂಪೂರ್ಣವಾಗಿ ಗಣನೆಗೆ ತೆಗೆದುಕೊಳ್ಳುವ ಇಂಧನ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು. ನಮಗೆ, ಭಾರತೀಯ ಗ್ರಾಹಕರ ಹಿತಾಸಕ್ತಿ ಪ್ರಮುಖ ಆದ್ಯತೆಯಾಗಿದೆ ಮತ್ತು ಯಾವಾಗಲೂ ಇರುತ್ತದೆ. ಅಗತ್ಯವಿರುವಲ್ಲಿ, ಈ ಅಸ್ಥಿರ ಪರಿಸ್ಥಿತಿಯಲ್ಲಿ ನಮ್ಮ ಇಂಧನ ಉದ್ಯಮಗಳ ಪ್ರಯತ್ನಗಳನ್ನು ಭಾರತೀಯ ರಾಜತಾಂತ್ರಿಕತೆಯು ಬೆಂಬಲಿಸಿದೆ ಎಂದು ಅವರು ಹೇಳಿದರು.

# ಶರಣ ಬಿಬ್ಬಿ ಬಾಚರಸ ಸ್ಮರಣಾ ದಿನಾಚರಣೆ ಮತ್ತು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ




**ನೈಜ್ಯ ದೆಸೆ ನ್ಯೂಸ್**

ರಾಯಚೂರು: ಬಸವಣ್ಣ ಮಹಾಮನೆಯ ನಿರ್ಮಾಣದ ಮೂಲಕ ಎಲ್ಲ ಮಹಿಳೆಯರಿಗೆ ಸಮಾನತೆ ನೀಡಿದ್ದಾರೆ' ಎಂದು ಶಿಶು ಹೃದ್ರೋಗ ತಜ್ಞೆ ಡಾ. ವಿಜಯಲಕ್ಷ್ಮೀ ಹೇಳಿದರು. ಇಲ್ಲಿನ ಬಸವ ಕೇಂದ್ರದಲ್ಲಿ ಬಸವ ಕೇಂದ್ರ, ಅಕ್ಕನ ಬಳಗ, ಜಿಲ್ಲಾ ಕದಳಿ ವೇದಿಕೆ, ಜಾಗತಿಕ ಲಿಂಗಾಯತ ಮಾಹಾಸಭಾ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಶರಣ ಬಿಬ್ಬಿ ಬಾಚರಸ ಸ್ಮರಣಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮುಖ್ಯವಾಗಿ ಮನಸ್ಸಿನ ಭಾವನೆಗಳನ್ನು ಸ್ವತಂತ್ರವಾಗಿ ಆಲೋಚಿಸಿ ಬೇರೆ ಬೇರೆ ರೀತಿಯಲ್ಲಿ ಸಮಾಜಕ್ಕೆ ಮುಟ್ಟಿಸುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿದ್ದರು' ಎಂದು ತಿಳಿಸಿದರು. 'ಕಲ್ಯಾಣ ಕ್ರಾಂತಿಯ ನಂತರ ವಚನಗಳು ಉಳಿದಿದ್ದರೆ ಅದಕ್ಕೆ ಶರಣೆ ಅಕ್ಕನಾಗಮ್ಮನ ಧೃಡ ನಿರ್ಧಾರವೇ ಕಾರಣ. ಪ್ರತಿ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ ಎಂಬಂತೆ ಅಂದು ಬಸವಣ್ಣ ಮನೆ ಬಿಟ್ಟು ಹೊರಟಾಗ ತಾಯಿಯಾಗಿ ಜೊತೆಗೆ ಹೊರಟು ಮಗ ಚೆನ್ನಬಸವಣ್ಣನನ್ನು, ಬಸವಣ್ಣನನ್ನು ಕಾಪಾಡಿದ್ದು ಅಕ್ಕನಾಗಮ್ಮ' ಎಂದು ವಿವರಿಸಿದರು. ಡಾ. ಶಿಲಾ ಸಗರದ ಮಾತನಾಡಿದರು. ಕಾರ್ಯಕ್ರಮವನ್ನು ಗಿರಿಜಾ ಸಿರವಾರ ಉದ್ಘಾಟಿಸಿದರು. ರಾಜನಗೌಡ ಕೋಳೂರು ಅಧ್ಯಕ್ಷತೆ ವಹಿಸಿದ್ದರು.

ಜಗದೇವಿ, ಉಮಾದೇವಿ, ಲಲಿತಾ, ಚಂದ್ರಕಲಾ ಪಾಟೀಲ, ಸುನಂದ ಪಾಟೀಲ, ಸರ್ವಮಂಗಳಾ ಹಿರೇಮಠ, ಪಾರ್ವತಮ್ಮ ಮಲದಕಲ್, ಸುಮಂಗಲಾ ಸಕ್ರಿ, ಜೆ.ಬಸವರಾಜ, ಶಿವಯೋಗಿ ಪಾಟೀಲ ಉಪಸ್ಥಿತರಿದ್ದರು. ಪಾರ್ವತಿ ಪಾಟೀಲ ನಿರೂಪಿಸಿದರು. ಪ್ರಿಯಾಂಕ ಗದ್ವಾಲ್ ಸ್ವಾಗತಿಸಿದರು. ಜಯಶ್ರೀ ವಂದಿಸಿದರು.

# ಘನ ತ್ಯಾಜ್ಯ ಹಾಗೂ ಮಲ ತ್ಯಾಜ್ಯ ವಿಲೇವಾರಿ ಘಟಕಗಳ ಪರಿಶೀಲನೆ

**ನೈಜ್ಯ ದೆಸೆ ನ್ಯೂಸ್**

ತಾಲೂಕಿನ ಗುರುಗುಂಟಾ ಗ್ರಾಮದ ಮಲತ್ಯಾಜ್ಯ ವಿಲೇವಾರಿ ಘಟಕ (ಎಸ್–ಎಸ್‌ಟಿಪಿ) ಕಟ್ಟಡ ಕಾಮಗಾರಿಯನ್ನು ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಬೇಕೆಂದು ಅಧಿಕಾರಿಗಳು, ಗುತ್ತಿಗೆದಾರರಿಗೆ ರಾಯಚೂರು ಜಿಪಂ ಸಿಇಒ ಈಶ್ವರ ಕಾಂದೂ ಸೂಚನೆ ನೀಡಿದರು.

ಗುರುಗುಂಟಾ ಗ್ರಾಮದ ಘನ ತ್ಯಾಜ್ಯ ಹಾಗೂ ಮಲ ತ್ಯಾಜ್ಯ ವಿಲೇವಾರಿ ಘಟಕಗಳಿಗೆ ಶನಿವಾರ ಭೇಟಿ ನೀಡಿ ಪರಿಶೀಲಿಸಿ ಮಾತನಾಡಿದರು. ಘನತ್ಯಾಜ್ಯ ವಿಲೇವಾರಿ ಘಟಕವನ್ನು ಸರಿಯಾಗಿ ನಿರ್ವಹಣೆ ಮಾಡಬೇಕು. ಬಾಟಲ್‌ಗಳು, ಪ್ಲಾಸ್ಟಿಕ್ ತ್ಯಾಜ್ಯ ಪ್ರತ್ಯೇಕವಾಗಿ



ವಿಂಗಡಿಸಬೇಕು ಎಂದು ಗ್ರಾಮೀಣ ಕುಡಿವ ನೀರು ಮತ್ತು ನೈರ್ಮಲ್ಯ ಇಲಾಖೆ ಎಇಇ ಪರಮೇಶ್ವರ ಟೆಂಗಳಿಕರ್, ಪಿಡಿಒ ಶಿವರಾಜ, ಗುತ್ತಿಗೆದಾರ ಪ್ರಶಾಂತಗೆ ತಾಕೀತು ಮಾಡಿದರು.

ತಾಪಂ ಇಒ ಉಮೇಶ, ಎಡಿ ವೆಂಕಟೇಶ ದೇಸಾಯಿ, ಪಂಪನಗೌಡ ಪಾಟೀಲ್, ಯೋಜನಾಧಿಕಾರಿ ಮಹಾದೇವಪ್ಪ, ಹನುಮಗೌಡ, ಐಇಸಿ ಸಂಯೋಜಕ ಬಾಲಪ್ಪ, ಜಾವೀದ್‌ಪಾಷಾ, ಅಜೀಂ ಪಾಷಾ, ಅರುಣಕುಮಾರ, ಪಿಡಿಒ ಶಿವಪ್ಪ ಇತರರಿದ್ದರು.

# ಛತ್ರಪತಿ ಶಿವಾಜಿ ಜಯಂತಿ ಆಚರಣೆ

**ನೈಜ್ಯ ದೆಸೆ ನ್ಯೂಸ್**

ಹಿಂದೂ ಸ್ವರಾಜ್ ವತಿಯಿಂದ ಛತ್ರಪತಿ ಶಿವಾಜಿ ಮಹಾರಾಜ ಜಯಂತಿ ಆಚರಣೆ ಭಾನುವಾರ ನಡೆಯಿತು.

ಪಟ್ಟಣದ ಸೋಮವಾರ ಪೇಟೆ ಬನ್ನಿ ಮಹಾಂಕಾಳಿ ಕಟ್ಟೆ ಮುಂಭಾಗದಲ್ಲಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಸಿದ್ದಯ್ಯ ಸ್ವಾಮಿ ಪೂಜೆ ಸಲ್ಲಿಸಿದರು.

ಶಶಿಕಲಾ ಬೋವಿ ಮೆರವಣಿಗೆಗೆ ಚಾಲನೆ ನೀಡಿ, ಪುಷ್ಪರ್ಚನೆ ಮಾಡಿದರು. ಮೆರವಣಿಗೆಯಲ್ಲಿ ವಿವಿಧ ವಾದ್ಯ ತಂಡಗಳು ಭಾಗವಹಿಸಿದ್ದವು. ರಾಯಚೂರು ಎಸ್‌ಪಿ ಅರುಣಾಂಗ್ಷ ಗಿರಿ ನೇತೃತ್ವದಲ್ಲಿ ಲಿಂಗಸುಗೂರು ಡಿ.ವೈ.ಎಸ್.ಪಿ, ಮಸ್ಕಿ ಸಿಪಿಐ, ಮುದಗಲ್ ಪಿಎಸ್‌ಐ ಸೇರಿದಂತೆ ಇನ್ನಿತರ ಪಿಎಸ್‌ಐ, ಪೊಲೀಸ್ ಬಿಗಿ ಬಂದೋಬಸ್ತ್ ಮಾಡಿದ್ದರು.




ಗುರುರಾಜ ದೇಶಪಾಂಡೆ, ಗುಂಡಪ್ಪ ಗಂಗಾವತಿ, ಎಸ್‌ಎಸ್ ಬ್ಯಾಂಕ್ ಅಧ್ಯಕ್ಷ ಶರಣಬಸವ ವ್ಯಾಕರನಾಳ, ರವಿ ಕಟ್ಟಿಮನಿ, ಪಕೀರಪ್ಪ ಕುರಿ, ನ್ಯಾಮತ್ ಖಾದ್ರಿ, ರಘುವೀರ ಮೇಗಳಮನೆ, ಕರಿಯಪ್ಪ ಯಾದವ, ಕಾಂತ ಕುಮಾರ ಪತ್ತಾರ, ಸಂತೋಷ, ರಾಘವೇಂದ್ರ ಸುರಪುರ, ಉದಯಕುಮಾ ಕಮ್ಮಾರ, ವಿಜಯ ಪಾಟೀಲ ಇದ್ದರು.

# ಅಕ್ಷರ ಆವಿಷ್ಕಾರ ಯೋಜನೆಯ ಅತಿಥಿ ಶಿಕ್ಷಕರ ಹತ್ತು ತಿಂಗಳ ಗೌರವದನ ಬಿಡುಗಡೆ ಮಾಡಲು ಎಐಡಿವೈಓ ಒತ್ತಾಯ.

**ನೈಜ್ಯ ದೆಸೆ ನ್ಯೂಸ್**

ರಾಯಚೂರು: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (KKRDB) ಯ ಅಕ್ಷರ ಆವಿಷ್ಕಾರ ಯೋಜನೆ ಅಡಿಯಲ್ಲಿ ಕಲ್ಯಾಣ ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ ಹೊಸದಾಗಿ ಪ್ರಾರಂಭವಾದ ಎಲ್.ಕೆ.ಜಿ, ಯುಕೆಜಿ (ಇಸಿಸಿಇ)ಮತ್ತು ದ್ವಿಭಾಷಾ (ಬೈಲಿಂಗ್ವಲ್) ತರಗತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರು ಹಾಗೂ ಆಯಾಗಳಿಗೆ ಜೂನ್ ತಿಂಗಳಿನಿಂದ ಇಂದಿನವರೆಗೂ ಸಂದಾಯವಾಗದೇ ಇರುವ ಗೌರವಧನ ಕೂಡಲೆ ಬಿಡುಗಡೆ ಮಾಡುವಂತೆ ಅತಿಥಿ ಶಿಕ್ಷಕರ ಪರವಾಗಿ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್( ಎಐಡಿವೈಓ) ಜಿಲ್ಲಾ ಸಮಿತಿ ನೇತೃತ್ವದಲ್ಲಿ ಕೆಕೆಆರ್‌ಡಿಬಿ ಅಧ್ಯಕ್ಷರಾದ ಅಜಯ್ ಸಿಂಗ್ ಅವರಿಗೆ ಬರೆದ ಮನವಿ ಪತ್ರವನ್ನು ಮಾನ್ಯ ಜಿಲ್ಲಾಧಿಕಾರಿಗಳ ಮೂಲಕ ಸಲ್ಲಿಸಲಾಯಿತು.

9 ತಿಂಗಳಿನಿಂದ ಅತಿಥಿ ಶಿಕ್ಷಕರು ಗೌರವಧನ ಬಿಡುಗಡೆ ಆಗದಿರುವುದರಿಂದ ಬಹಳಷ್ಟು ತೊಂದರೆಗೆ ಸಿಲುಕಿದ್ದಾರೆ. ಹಲವರು




ಕುಟುಂಬ ನಿರ್ವಹಣೆಗೆ ಪರದಾಡುತ್ತಿದ್ದಾರೆ. ಸಾಲ ಮಾಡಿಕೊಂಡು ಬದುಕುತ್ತಿದ್ದಾರೆ. ತೀವ್ರವಾದ ಆರ್ಥಿಕ ಸಂಕಷ್ಟಕ್ಕೆ ಗುರಿಯಾಗಿದ್ದಾರೆ. ಆರ್ಥಿಕ ವರ್ಷ ಮುಗಿಯಲು ಬಂದರು ಸಹ ಗೌರವಧನ ದೊರೆಯದೆ ಇರುವುದರಿಂದ ಮತ್ತಷ್ಟು ಆತಂಕಕ್ಕೆ ಒಳಗಾಗಿದ್ದಾರೆ. ಎರಡು ತಿಂಗಳಿನಿಂದ ಗೌರವಧನ ಬಿಡುಗಡೆ ಮಾಡುವಂತೆ ಹಲವು ಶಾಲೆಗಳ ಅತಿಥಿ ಶಿಕ್ಷಕರು ಹಾಗೂ ಆಯಾಗಳು ಮುಖ್ಯೋಪಾಧ್ಯಾಯರು, ಸಿಆರ್‌ಪಿ, ಬಿಇಒ, ಡಿಡಿಪಿಐ, ಜಿಲ್ಲಾಧಿಕಾರಿಗಳ ಮೂಲಕ ಕೆಕೆಆರ್‌ಡಿಬಿ ಅಧ್ಯಕ್ಷರಿಗೂ ಮನವಿ ಪತ್ರ ಸಲ್ಲಿಸಲಾಗಿದೆ. ಆದರೂ ಸಹ ಇದುವರೆಗೆ ಸಮಸ್ಯೆಗೆ ಸ್ಪಷ್ಟ ಪರಿಹಾರ ದೊರಕಿಲ್ಲ.

ಆದ್ದರಿಂದ ತಾವು ಈ ಕೂಡಲೇ ಅತಿಥಿ ಶಿಕ್ಷಕರ ಗೌರವಧನ ಸಂದಾಯ ಮಾಡುವಂತೆ ಈ ಮೂಲಕ ಮನವಿ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು 2025?26ನೇ ಸಾಲಿನ ಆಯವ್ಯಯ ಭಾಷಣದಲ್ಲಿ (ಕಂಡಿಕೆ 111(1)) ಅತಿಥಿ ಶಿಕ್ಷಕರ ಗೌರವಧನವನ್ನು ?2000 ಹೆಚ್ಚಿಸುವುದಾಗಿ ಘೋಷಣೆ ಮಾಡಿ ಆದೇಶ ಹೊರಡಿಸಿದ್ದರು, ಅದು ಕಲ್ಯಾಣ ಕರ್ನಾಟಕ ಭಾಗದ ಅತಿಥಿ ಶಿಕ್ಷಕರಿಗೆ ಅನ್ವಯಿಸುವುದಿಲ್ಲ ಎಂದು ತಿಳಿಸಿರುವುದು ಅಸಮಾಧಾನಕ್ಕೆ ಕಾರಣವಾಗಿದೆ.

ಎಲ್ಲಾ ಅತಿಥಿ ಶಿಕ್ಷಕರಿಗೆ 12,000 ಗೌರವಧನ ನೀಡಬೇಕೆಂದು ಆದೇಶವಿದ್ದರೂ ಸಹ 10,000 ಗೌರವಧನ ನೀಡುವುದು ಒಂದೇ ಶಾಲೆಯಲ್ಲಿ ಕಾರ್ಯನಿರ್ವಹಿಸುವ ಅತಿಥಿ ಶಿಕ್ಷಕರ ನಡುವೆ ತಾರತಮ್ಯ ತೋರಿಸಿದಂತಾಗುತ್ತದೆ. ಮಕ್ಕಳಿಗೆ ಪಾಠ ಬೋಧನೆ ಮಾಡುವಲ್ಲಿ ತೊಡಗಿರಬೇಕಾದ ಅತಿಥಿ ಶಿಕ್ಷಕರು ತಿಂಗಳಲ್ಲಿ ಒಂದೆರಡು ದಿನ ಅಧಿಕಾರಿಗಳ ಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿಗೆ ಒಳಗಾಗಿದ್ದಾರೆ. "ಕೆಲಸ ಮಾಡಿದರೂ ಗೌರವಧನಕ್ಕಾಗಿ ಪರದಾಡುವ ಪರಿಸ್ಥಿತಿ ಬಂದಿದೆ" ಈ ಹಿನ್ನೆಲೆಯಲ್ಲಿ ಅಗತ್ಯ ಅನುದಾನ ಒದಗಿಸಿ ಅತಿಥಿ ಶಿಕ್ಷಕರ ಗೌರವಧನವನ್ನು ಕೂಡಲೇ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮನವಿ ಮಾಡಿ ಒತ್ತಾಯಿಸಿದ್ದಾರೆ.

ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿಗಳು ಕೆಕೆಆರ್‌ಡಿಬಿ ಕಾರ್ಯದರ್ಶಿಗಳು ಮತ್ತು ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ ಉಪನಿರ್ದೇಶಕರ ಜೊತೆಗೆ ಮಾತನಾಡಿ ಎರಡು ದಿನಗಳಲ್ಲಿ ಗೌರವದಧನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.ಜಿಲ್ಲಾಧ್ಯಕ್ಷರಾದ ಚನ್ನಬಸವ ಜಾನೇಕಲ್, ಜಿಲ್ಲಾ ಕಾರ್ಯದರ್ಶಿ ವಿನೋದ್ ಕುಮಾರ್, ಶಿವಪ್ಪ ಅಸ್ಕಿಹಾಳ್ ನೇತೃತ್ವ ವಹಿಸಿದ್ದರು ಮತ್ತು ವಿವಿಧ ಶಾಲೆಗಳ ಅತಿಥಿ ಶಿಕ್ಷಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

ಶಿಕ್ಷಣದ ಮಹಿಮೆ

ಜ್ಞಾನವೇ ಜೀವನದ ಬೆಳಕು,
ಅಜ್ಞಾನವೆಂಬ ಕತ್ತಲೆಗೆ ದೀಪವು.
ಶಿಕ್ಷಣವೆಂಬ ಅಮೂಲ್ಯ ಧನ,
ಮಾನವನಿಗೆ ನೀಡುವ ಮಹಾನ್ ಗುರುತು.

ಪುಸ್ತಕಗಳು ಮಾತಾಡುವ ಸ್ನೇಹಿತರು,
ಗುರುಗಳು ಜೀವನದ ದಾರಿದೀಪರು.
ಕಲಿತ ಜ್ಞಾನ ಹೃದಯದಲ್ಲಿ ಉಳಿದರೆ,
ಭವಿಷ್ಯವು ಬೆಳಗುವ ಸುಂದರ ನಕ್ಷತ್ರ.

ಶಿಕ್ಷಣದಿಂದ ಬದಲಾಯುವ ಸಮಾಜ,
ಸತ್ಯ ಮತ್ತು ಧರ್ಮದ ಮಾರ್ಗ.
ಕಲಿಯುವ ಮನಸ್ಸು ಇರಲಿ ಸದಾ,
ಅದು ಜೀವನದ ನಿಜವಾದ ಶ್ರೇಷ್ಠ ಸಂಪತ್ತು.

ರಮೇಶ್.ಕೆ

## ಶ್ರೀ ಸುಯತೀಂದ್ರ ತೀರ್ಥರ ರಥೋತ್ಸವ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿ ಮಠದ ಆವರಣದಲ್ಲಿ ಶ್ರೀ ಸುಯತೀಂದ್ರ ತೀರ್ಥರ ಮಧ್ಯಾರಾಧನೆಯ ಪ್ರಯುಕ್ತ ಶ್ರೀ ಸುಯತೀಂದ್ರ ತೀರ್ಥರ ಮೂಲ ಬೃಂದಾವನಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು.



ಮಠದ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥರ ಸಾನ್ನಿಧ್ಯದಲ್ಲಿ ಪಂಚಾಮೃತಾಭಿಷೇಕ ನೆರವೇರಿತು. ನಂತರ ಶ್ರೀ ಸುಯತೀಂದ್ರ ತೀರ್ಥರ ರಥೋತ್ಸವಕ್ಕೆ ಚಾಲನೆ ನೀಡಿದರು. ಅಪಾರ ಸಂಖ್ಯೆಯಲ್ಲಿ ಭಕ್ತರು, ಶಿಷ್ಯರು, ಭಜನಾ ಮಂಡಳಿಯ ಸದಸ್ಯರು ಶ್ರದ್ಧಾ ಭಕ್ತಿಯಿಂದ ರಥೋತ್ಸವದಲ್ಲಿ ಪಾಲ್ಗೊಂಡರು.

## ಜಿ.ಪಂ ಸಿಇಒ ಭೇಟಿ ಕಾಮಗಾರಿ ವಿಕ್ಷಣೆ

ನೈಜ್ಯ ದೆಸೆ ನ್ಯೂಸ್

ಹಟ್ಟಿ: ಸಮೀಪದ ಗುರುಗುಂಟಾ ಗ್ರಾಮಕ್ಕೆ ಜಿ.ಪಂ ಸಿಇಒ ಈಶ್ವರ ಕಾಂದೂ ಭೇಟಿ ನೀಡಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಪ್ರಸಂಗ ಶನಿವಾರ ಸಂಜೆ ಜರುಗಿದೆ. ಗುರುಗುಂಟಾ ಗ್ರಾಮದಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ಕಾಮಗಾರಿ ನನೆಗುದಿದೆ ಬಿದ್ದಿದ್ದು, ತಾ.ಪಂ ಇಒ, ಗ್ರಾ.ಪಂ ಪಿಡಿಒ, ಜೆಇ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗದ ಅಧಿಕಾರಿ ಹಾಗೂ ಗುತ್ತಿಗೆದಾರನಿಗೆ ಮಾ.31ರ ಒಳಗೆ ಪೂರ್ಣಗೊಳಿಸಬೇಕೆಂದು ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದರು.



ಗುರುಗುಂಟಾ ಹೋಬಳಿ ವ್ಯಾಪ್ತಿಯಲ್ಲಿ ವಿವಿದ ಕಾಮಗಾರಿ ಗುತ್ತಿಗೆ ಪಡೆದ ಗುತ್ತಿಗೆದಾರರು ಕಾಮಗಾ-ರಿಗಳನ್ನು ಪೂರ್ಣಗೊಳಿಸದಿದ್ದರೆ ಅಂಥವರ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಜನರಿಂದ ದೂರುಗಳು ಬಂದಿವೆ. ಬೇಸಿಗೆ ಮುಗಿಯುವರೆಗೂ ನೀರಿನ ಸಮಸ್ಯೆ ಆಗದಂತೆ ಅಧಿಕಾರಿಗಳು ನೊಡಿಕೊಳ್ಳಿ ಎಂದು ತಾಕೀತು ಮಾಡಿದರು. ಈ ವೇಳೆ ತಾ.ಪಂ ಇಒ ಉಮೇಶ, ವಿವಿಧ ಇಲಾಖೆಯ ಅಧಿಕಾ-ರಿಗಳಾದ ವೆಂಕಟೇಶ ದೇಸಾಯಿ, ಪಂಪನಗೌಡ ಪಾಟೀಲ, ಮಹೀಬೂಬ್, ಹನುಮಂತಪ್ಪ, ಮಹಾದೇವಪ್ಪ, ಬಾಲಪ್ಪ, ಪಿಡಿಒ ಶಿವಪ್ಪ, ಜಾವಿದ್ ಪಾಶ ಇತರರು ಉಪಸ್ಥಿತರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ನಾಟಕದ ಒಳಿತುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಇಂದಿನ ಆಧುನಿಕ ತಂತ್ರಜ್ಞಾನದ ಯುಗದಲ್ಲಿ ಮೊಬೈಲ್ ಹಾಗೂ ಸಾಮಾಜಿ-ಕ ಜಾಲತಾಣಗಳಿಂದಾಗಿ ರಂಗಭೂಮಿಯ ಶ್ರೇಷ್ಠ ನಾಟಕ ಕಲೆ ಕಣ್ಮರೆ ಯಾಗುತ್ತಿದೆ ಅದನ್ನು ರಕ್ಷಿಸಿ ಬೆಳೆಸುವ ಅಗತ್ಯ ಇದೆ ಎಂದು ಖ್ಯಾತ ನೇತ್ರ ತಜ್ಞ ಡಾ.ಪ್ರಭುಗೌಡ ಲಿಂಗದಳ್ಳಿ ಹೇಳಿದರು. ತಾಲೂಕಿನ ಬೆಕಿನಾಳ ಗ್ರಾಮದಲ್ಲಿ ಹುಬ್ಬಳ್ಳಿ ಶ್ರೀ ಸಿದ್ಧಾರೂಢರ ಪುರಾಣ ಮಹಾಮಂಗಲೋತ್ಸವದ ಅಂಗವಾಗಿ ಹಮ್ಮಿಕೊಂಡ "ಅನ್ನ ಕೊಟ್ಟ ರೈತನಿಗೆ ಸಾವು ಕೊಟ್ಟ ಸರಕಾರ" ನಾಟಕೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೇವಲ ಮನೋರಂಜನೆಗಾಗಿ ನಾಟಕಗಳನ್ನು ನೋಡದೆ ಅದರಲ್ಲಿರುವ



ಒಳ್ಳೆಯದನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು. ಈ ಗ್ರಾಮದ ರಂಗಭೂಮಿ ಹವ್ಯಾಸಿ ಕಲಾವಿದರೇ ಈ ನಾಟಕವನ್ನು ಮಾಡುತ್ತಿರುವುದು ಸಂತೋಷದ ವಿಷಯವಾಗಿದ್ದು ಅವರನ್ನು ಅಭಿನಂದಿಸುತ್ತೇನೆ ಎಂದರು. ನಾಟಕ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ ದೇವರ ಹಿಪ್ಪರಗಿ ಮತಕ್ಷೇತ್ರ ಶಾಸಕ ರಾಜುಗೌಡ ಪಾಟೀಲ (ಕು.ಸಾಲವಾಡಗಿ) ಅವರು ಮಾತನಾಡಿ ಈ ಕಾರ್ಯಕ್ರಮದಲ್ಲಿ ಯಾವುದೇ ರೀತಿಯ ಗೊಂದಲಗಳು ನಡೆಯದಂತೆ ನೋಡಿಕೊಂಡು ಶಾಂತ ರೀತಿಯಿಂದ ಯಶಸ್ವಿಗೊಳಿಸಲು ಎಲ್ಲರೂ ಪ್ರಯತ್ನಿಸಿ ನಾಟಕ ಒಂದು ಪ್ರಭಾವ ಪೂರ್ಣವಾದ ಮಾಧ್ಯಮವಾಗಿದ್ದು ನಮ್ಮ ಬದುಕನ್ನು ಬದಲಿಸಬಲ್ಲ ಶಕ್ತಿ ಅದಕ್ಕಿದೆ ಆದ-ರಿಂದ ನಾಟಕದ ಹಿಂದಿರುವ ತಿರಳನ್ನು ತಿಳಿದುಕೊಳ್ಳಲು ಪ್ರಯತ್ನಿಸಿ ಎಂದರು.

ಗುಂಡಕನಾಳ ಬ್ರಹನ್ಮಠದ ಪೂಜ್ಯ ಶ್ರೀ ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ಗಣ್ಯರಾದ ಘನಮಠೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಸ್.ಎಂ.ಸಜ್ಜನ, ಪಿಕೆಪಿಎಸ್ ಅಧ್ಯಕ್ಷ ಅಣ್ಣಪ್ಪಗೌಡ ಪಾಟೀಲ, ಅಶೋಕ ವಡವಡಗಿ, ನಿವೃತ್ತ ಶಿಕ್ಷಕ ಎಸ್.ಎಂ.ಬೇನಾಳಮಠ, ಸಿದ್ದನಗೌಡ ಬಿರಾದಾರ(ಜಲಪೂರ), ರಾಯಪ್ಪಗೌಡ ಬಿರಾದಾರ, ಮಹದೇವಪ್ಪ ಮೋಪುಗಾರ,ಡಾ.ಸುಭಾಸ ಉಟಕೂರ,ಮಲ್ಲಿಕಾರ್ಜುನ ಮಠ, ಮಲ್ಲಣ್ಣ ಟಕ್ಕಳಕಿ, ಮಡಿವಾಳಪ್ಪ ತಳವಾರ, ಬಸವರಾಜ ವಾಲೀಕಾರ, ಪರಶುರಾಮ ವಾಲಿಕಾರ, ಪ್ರಭುಗೌಡ ಶಂ.ಪಾಟೀಲ,ಬಾಬುಗೌಡ ಕರಕಳ್ಳಿ, ರಮೇಶಗೌಡ ವಡ್ಡೋಡಗಿ, ಶ್ರೀಶೈಲ್ ವಾಲಿಕಾರ, ಈರಯ್ಯ ಆಲ್ಯಾಳಮಠ, ಭೀಮಣ್ಣ ಸಜ್ಜನ ಮತ್ತಿತರರು ಇದ್ದರು.

# ಮಾನ್ವಿಯಲ್ಲಿ ನೂತನ ಅಶ್ವಿನಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನೆ




ನೈಜ್ಯ ದೆಸೆ ನ್ಯೂಸ್

ಮಾನ್ವಿ: ಮಾನ್ವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಾನ್ವಿ ನಗರದ ಆರ್‌ಜಿ ಕ್ಯಾಂಪ್ ರಸ್ತೆಯಲ್ಲಿ ನಿರ್ಮಿಸಲಾದ ನೂತನ ಅಶ್ವಿನಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ. ಹಂಪಯ್ಯ ನಾಯಕ್ ಅವರು ಉದ್ಘಾಟಿಸಿದರು. ಈ ಮೂಲಕ ಸ್ಥಳೀಯ ಜನತೆಗೆ ಉತ್ತಮ ಆರೋಗ್ಯ ಸೇವೆಗಳು ಲಭ್ಯವಾಗಲಿವೆ ಎಂದು ಅವರು ತಿಳಿಸಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಜನರಿಗೆ ಸಮೀಪದಲ್ಲೇ ಉತ್ತಮ ವೈದ್ಯಕೀಯ ಸೌಲಭ್ಯಗಳು ದೊರೆಯುವುದು ಅತ್ಯಂತ ಮುಖ್ಯವಾಗಿದೆ. ನೂತನವಾಗಿ ಆರಂಭವಾಗಿರುವ ಅಶ್ವಿನಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮಾನ್ವಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ಆರೋಗ್ಯ ಸೇವೆಯಲ್ಲಿ ಮಹತ್ವದ ಕೊಡುಗೆ ನೀಡಲಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಾಬ್, ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ನರಸರಾವ್ ಪೇಟ್ ವಿಧಾನಸಭಾ ಕ್ಷೇತ್ರದ ಶಾಸಕ ಡಾ. ಚಡಲವಾಡ ಶ್ರೀ ಅರವಿಂದ್ ಬಾಬು, ಮಾಜಿ ಶಾಸಕ ರಾಜ ವೆಂಕಟಪ್ಪ ನಾಯಕ್, ಕಲ್ಮಟ್ಟದ ಶ್ರೀಗಳು ಹಾಗೂ ಚಿಕ್ಕಲಪರ್ವಿ ಮಠದ ಶ್ರೀಗಳು, ಸೆಂಟ್ ಮೇರಿ ಚರ್ಚ್ ಫಾದರ್, ಕುರುಬ ಸಮಾಜದ ರಾಜ್ಯಾಧ್ಯಕ್ಷರಾದ ಎಂ. ಈರಣ್ಣ, ಎ. ಬಾಲಸ್ವಾಮಿ ಕೊಡಲಿ, ರೌಡ್ರು ಮಹಾಂತೇಶ್ ಸ್ವಾಮಿ, ಸೈಯದ್ ಖಾಲಿದ್ ಖಾದ್ರಿ, ರಾಜ ಸುಭಾಷ್ ಚಂದ್ರ ನಾಯಕ್, ಜಿ. ನಾಗರಾಜ್, ಚಾಂದ್ ಪಾಶ ಗುತ್ತೇದಾರ್, ನಿವೃತ್ತ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಯಾದ ಎಸ್.ಬಿ. ಪಾಟೀಲ್, ನ್ಯಾಯವಾದಿಗಳಾದ ಎ.ಬಿ. ಉಪ್ಪಳಮಠ, ಆರ್‌ಜಿ ಕ್ಯಾಂಪ್ ರಾಮಕೃಷ್ಣ, ವಿ.ಟಿ. ಮಲ್ಲಿಕಾರ್ಜುನ್, ಸತ್ತಾರ್ ಬಂಗ್ಲೆವಾಲೆ ಸೇ-ರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

ಆಸ್ಪತ್ರೆಯನ್ನು ಆರಂಭಿಸಿರುವ ವೈದ್ಯ ದಂಪತಿಗಳಾದ ಡಾ. ರಮ್ಯಾ ವೀರವಲ್ಲಿ ಮತ್ತು ಡಾ. ಅಶ್ವಿನಿ ಕಾಂತ್ ತಲತೊಟ್ಟಿ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಿ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಪುರಸಭೆಯ ಮಾಜಿ ಸದಸ್ಯರುಗಳು, ವಿವಿಧ ಸಂಘಟನೆಗಳ ಮುಖಂಡರುಗಳು ಹಾಗೂ ಸ್ಥಳೀಯ ನಾಗರಿಕರು ಭಾಗವಹಿಸಿದ್ದರು. ಈ ನೂತನ ಆಸ್ಪತ್ರೆ ಆರಂಭದಿಂದ ಮಾನ್ವಿ ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ಗುಣಮಟ್ಟದ ವೈದ್ಯಕೀಯ ಸೇವೆ ದೊರೆಯುವ ನಿರೀಕ್ಷೆ ವ್ಯಕ್ತವಾಗಿದೆ.

## ನಕ್ಕುಂದಿ ಉಟಕುನೂರು ಸಂಗಪುರ ಗ್ರಾಮಗಳಲ್ಲಿ ಅಸ್ಪೃಶ್ಯತೆ ನಿರ್ಮೂಲನೆ ಕುರಿತು ಬೀದಿ ನಾಟಕ ಪ್ರದರ್ಶನ

ನೈಜ್ಯ ದೆಸೆ ನ್ಯೂಸ್

ಮಾನವಿ: ಸಮಾಜ ಕಲ್ಯಾಣ ಇಲಾಖೆ ಮಾನ್ವಿ ಹಾಗೂ ಜನ ಸೇವಾ ಗ್ರಾಮೀಣಾಭಿವೃದ್ಧಿ (ರಿ) ನಕ್ಕುಂದಿ ಇವರ ಸಂಯುಕ್ತ ಆಶ್ರಯದಲ್ಲಿ ಗ್ರಾಮಗಳಲ್ಲಿ ಅಸ್ಪೃಶ್ಯತೆ ಬೀದಿ ನಾಟಕ ಮಾಡಿ ಅಸ್ಪೃಶ್ಯತೆ ಎಂಬುದು ಭಾರತ ದೇಶದ ದೊಡ್ಡ ಪಿಡುಗು ಗ್ರಾಮಸ್ಥರು ಮತ್ತು ಹಿರಿಯರು ಬುದ್ಧಿಜೀವಿಗಳು ಇಂತಹ ಅಸ್ಪೃಶ್ಯತೆ ಆಚರಣೆಯನ್ನು ಮಾಡಲು ನಾವು ಯಾವತ್ತಿಗೂ ಮುಂದಾಗಬಾರದು ಸಮಾಜದಲ್ಲಿ ಎಲ್ಲಾ ವರ್ಗದವರು ಎಲ್ಲ ಜಾತಿ ಜನಾಂಗದವರು ಸಮಾನತೆ ಕಾಣುವ ಗ್ರಾಮವನ್ನು ನಾವು ಬದಲಾವಣೆ ಮಾಡಬೇಕಾಗಿದೆ.

ಇಂಥ ಅಸ್ಪೃಶ್ಯತೆ ಗ್ರಾಮಗಳು ಕಂಡು ಬಂದರೆ ಕಾನೂನು ಪ್ರಕಾರ ದೊಡ್ಡ



ಅಪರಾಧವಾಗುತ್ತದೆ ಅಸ್ಪೃಶ್ಯತೆ ಆಚರಣೆ ಮಾಡಿದರೆ ಕಾನೂನು ಪ್ರಕಾರ ಅಪರಾಧ ಅಪರಾಧವಾಗುತ್ತದೆ ಎಂದು ಸಂಸ್ಥೆಯ ಅಧ್ಯಕ್ಷ ಬಸವರಾಜ ನಕ್ಕುಂದಿ ಮಾತನಾಡಿದರು ಕಲಾವಿದರು ಪ್ರದರ್ಶನ ಮಾಡಿ ಹೋಟೆಲ್ ಗಳಲ್ಲಿ ದೇವಸ್ಥಾನಗಳಲ್ಲಿ ದಲಿತರನ್ನು ಒಳಗೆ ಬಿಡಬೇಕು ಮತ್ತು ಅವ-ರಿಗೆ ಸಮಾನವಾಗಿ ಕಾಣುವಂತಾಗಬೇಕು ಮತ್ತು ಇನ್ನೂ ಕಟಿಂಗ್ ಶಾಪ್ ಗಳಲ್ಲಿ ಯಾವುದೇ ಭೇದಭಾವ ಮಾಡದೆ ಪರಿಶಿಷ್ಟ ಜಾತಿ ಜನಾಂಗದವರಿಗೆ ಕಟಿಂಗ್ ಮಾಡುವ ಮುಖಾಂತರ ಸಮಾನತೆಯನ್ನು ತೋರಿಸಬೇಕು.

ಕೆಲವು ಗ್ರಾಮಗಳಲ್ಲಿ ನಿಮ್ಮ ಈ ಬೀದಿ ನಾಟಕದಿಂದ ನಮಗೆ ತಿಳುವಳಿಕೆ ಬಂದಿದೆ ನಾವು



ಕೂಡ ಮುಂದೆ ಯಾವುದೇ ಕಾರಣಕ್ಕೂ ಅಸ್ಪೃಶ್ಯತೆ ಆಚರಣೆ ಮಾಡೋದಿಲ್ಲ ಎಂದು ಗ್ರಾಮದ ಮುಖಂಡರುಗಳು ಹರ್ಷ ವ್ಯಕ್ತಪಡಿಸಿದರು ಸಂಕಲ್ಪ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಪರಶುರಾಮ್ ಬಾಗಲವಾಡ ಅನಿಲ್ ಕುಮಾರ್ ಕಲಾವಿದರಾದ ರಾಜಪ್ಪ ಜ್ಯೋತಿ ಮಾದರ ಸುರೇಶ ಬಾಗೇಶ ಪ್ರಕಾಶ ಕಮಲ ಹಾಗೂ ಊರಿನ ಗ್ರಾಮಸ್ಥರು ಉಪಸ್ಥಿರಿದ್ದರು.

# ಸರ್ಕಾರಿ ಪ್ರೌಢ ಶಾಲೆಯಲ್ಲಿ ಸಮಾಜ ಸೇವಕ ಪ್ರದೀಪ್ ಪೂಜಾರಿ ಅವರಿಗೆ ಗೌರವ ಸನ್ಮಾನ

ನೈಜ್ಯ ದೆಸೆ ನ್ಯೂಸ್

ಮಸ್ಕಿ: ಮಸ್ಕಿ ತಾಲೂಕಿನ ಗುಂಡ ಗ್ರಾಮದಲ್ಲಿರುವ ಸರ್ಕಾರಿ ಪ್ರೌಢಶಾಲೆಯಲ್ಲಿ ಸರಸ್ವತಿ ಪೂಜೆ ಹಾಗೂ ಬೀಳ್ಕೊಡುಗೆ ಕಾರ್ಯಕ್ರಮವನ್ನು ಸಡಗರದಿಂದ ಆಚರಿಸಲಾಯಿತು. ಈ ಕಾರ್ಯಕ್ರಮದ ಅಂಗವಾಗಿ ಪ್ರದೀಪ್ ಪೂಜಾರಿ ಮಾಸ್ಟರ್, ಸಂಸ್ಥಾಪಕರು ಸೇವಾ ಸಿರಿ ಚಾರಿಟೇಬಲ್ ಟ್ರಸ್ಟ್ (ರಿ) ಅವರನ್ನು ಶಾಲೆಯ ವತಿಯಿಂದ ಆತ್ಮೀಯವಾಗಿ ಸ್ವಾಗತಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಪ್ರದೀಪ್ ಪೂಜಾರಿ ಅವರು ವಿದ್ಯಾರ್ಥಿಗಳು ಹಾಗೂ ಮಹಿಳೆಯರಿಗೆ




ಆತ್ಮರಕ್ಷಣೆಗೆ ಅಗತ್ಯವಾದ ಕರಾಟೆ ತರಬೇತಿ ಬಗ್ಗೆ ಮಾರ್ಗದರ್ಶನ ನೀಡಿದರು. ಮಹಿಳೆಯರು ಸ್ವಯಂರಕ್ಷಣೆಯಲ್ಲಿ ಸಬಲರಾಗಬೇಕು ಎಂಬ ಸಂದೇಶವನ್ನು ನೀಡಿದರು. ಇದರ ಜೊತೆಗೆ, ಪ್ರತಿ ವರ್ಷದಂತೆ ಈ ವರ್ಷವೂ ಶಾಲೆಯ ಮಕ್ಕಳಿಗೆ ಬೇಸಿಗೆಯ ತೀವ್ರ ಬಿಸಿಲನ್ನು ಗಮನಿಸಿ ಶಾಲೆಯ ತರಗತಿಗಳಿಗೆ 3 ಸೀಲಿಂಗ್ ಫ್ಯಾನ್‌ಗಳನ್ನು ಉಚಿತವಾಗಿ ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು "ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ"ನೀವು ದಾನವನ್ನು ಮಾಡಲು ಬಯಸಿದರೆ ಸರ್ಕಾರಿ ಶಾಲೆಗಳಿಗೆ ಏನಾದರೂ ದಾನ ಮಾಡಿ ಸರ್ಕಾರಿ ಶಾಲೆಯಲ್ಲಿನ ವಿದ್ಯಾರ್ಥಿಗಳ ಆಶೀರ್ವಾದ ಪಡೆಯಿರಿ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಗ್ರಾಮದ ಗಣ್ಯರು ಉಪಸ್ಥಿತರಿದ್ದರು. ಸರ್ಕಾರಿ ಶಾಲೆ ಉಳಿಸಿ ಬೆಳೆಸಿ.

# ರಾಜ್ಯದಲ್ಲಿ ಮೊದಲ ಬಾರಿಗೆ ರಾಯಚೂರಲ್ಲಿ ಮಹಿಳೆಯರಿಂದ ವಿಶೇಷ ಪರೇಡ್

ನೈಜ್ಯ ದೆಸೆ ನ್ಯೂಸ್

ರಾಯಚೂರು: ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಇಲ್ಲಿಯ ಪೊಲೀಸ್ ಕವಾಯತು ಮೈದಾನದಲ್ಲಿ ಭಾನುವಾರ ಮಹಿಳೆಯರ ಗೌರವಾರ್ಥ ವಿಶೇಷ. ಪರೇಡ್ ನಡೆಯಿತು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ ಮಾತನಾಡಿ, 'ಬೆಂಗಳೂರಲ್ಲಿ ಪೊಲೀಸ್ ಇಲಾಖೆಯಿಂದ ಮೊದಲ ಬಾರಿಗೆ ಮಹಿಳೆಯರ ವಿಶೇಷ ಪರೇಡ್ ಆಯೋಜಿಸಲಾಗಿತ್ತು. ರಾಜಧಾನಿ ಹೊರತು ಪಡಿಸಿ ರಾಜ್ಯದಲ್ಲಿ ಮೊದಲ ಬಾರಿಗೆ ರಾಯಚೂರಲ್ಲಿ ವಿಶೇಷ ಪರೇಡ್ ನಡೆಸಿ ಮಹಿಳೆಯ-ರಿಗೆ ಗೌರವ ಸಲ್ಲಿಸಲಾಗಿದೆ' ಎಂದು ತಿಳಿಸಿದರು.

'ಮಹಿಳಾ ಅಧಿಕಾರಿ ಹಾಗೂ ಸಿಬ್ಬಂದಿ ಸಹ ದೇಶ ಹಾಗೂ ಸಮಾಜದಲ್ಲಿ ಶಾಂತಿ



ಕಾಪಾಡುವಲ್ಲಿ ನೆರವಾಗುತ್ತಿದ್ದಾರೆ. ಮಹಿಳೆಯರು, ಮಕ್ಕಳಿಗೆ ಸಂಬಂಧಿಸಿದ ಅಪರಾಧ ಪ್ರಕರಣಗಳನ್ನು ಇತ್ಯರ್ಥಗೊಳಿಸುವಲ್ಲಿ ಹೆಚ್ಚು ಮುತುವರ್ಜಿಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ' ಎಂದು ಹೇಳಿದರು. ನಂತರ ಅರುಣಾಂಗ್ಶು ಗಿರಿ ಅವರು ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಜಿಲೆಯ ವಿವಿಧ ಪೊಲೀಸ್ ಠಾಣೆಗಳ 38 ಸಿಬ್ಬಂದಿಗೆ ಪ್ರಶಂಸಾ ಪತ್ರಗಳನ್ನು ವಿತರಿಸಿದರು. ಪೊಲೀಸ್ ಅಧಿಕಾರಿಗಳು, ಮಹಿಳಾ ಕಾನ್‌ಸ್ಟೆಬಲ್, ಡಿಎಆರ್, ವೈರ್‌ಲೆಸ್, ಮಿನಿಸ್ಟ್ರಿಯಲ್ ಸ್ಟಾಫ್



ಸೇರಿ ಒಟ್ಟು 116 ಮಹಿಳಾ ಪೊಲೀಸ್ ಸಿಬ್ಬಂದಿ ಪೊಲೀಸ್ ಪರೇಡ್‌ನಲ್ಲಿ ಭಾಗವಹಿಸಿದ್ದರು.

ಮಹಿಳಾ ಪೊಲೀಸ್ ಅಧಿಕಾ-ರಿಗಳಾದ ಸದರ್ ಬಜಾರ್ ಪಿಎಸ್‌ಐ ದೇವಮ್ಮ, ಪಿಎಸ್‌ಐ ಅಶ್ವಿನಿ, ಕಾನ್‌ಸ್ಟೆಬಲ್ ಲಕ್ಷ್ಮಿ, ಡಿಎಆರ್‌ನ ರಮ್ಯಾ ತಮ್ಮ ವೃತ್ತಿ ಅನುಭವ ಹಂಚಿಕೊಂಡರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರು ಮಹಿಳೆಯರ ಗೌರವಾರ್ಥ ವಿಶೇಷ ಪರೇಡ್ ಆಯೋಜಿಸಿದ್ದಕ್ಕೆ ಕೃತಜ್ಞತೆ ವ್ಯಕ್ತಪಡಿಸಿದರು. ಝಾನ್ಸಿರಾಣಿ ಲಕ್ಷ್ಮಿಬಾಯಿ, ಕಿತ್ತೂರು ರಾಣಿ ಚನ್ನಮ್ಮ, ಬಾಹ್ಯಾಕಾಶಕ್ಕೆ ಹಾರಿದ ಭಾರತೀಯ ಮೂಲದ ಮೊದಲ ಮಹಿಳಾ ಗಗನಯಾತ್ರಿ ಕಲ್ಪನಾ ಚಾವ್ಲಾ, 300 ದಿನಗಳಿಗಿಂತ ಹೆಚ್ಚು ಕಾಲ ಬಾಹ್ಯಾಕಾಶದಲ್ಲಿ ಬಹು ಕಾರ್ಯಾಚರಣೆಗಳನ್ನು ನಡೆಸಿದ ಗಗನಯಾತ್ರಿ ಸುನೀತಾ ವಿಲಿಯಮ್ಸ್ ಅವರ ಭಾವಚಿತ್ರಗಳನ್ನು ಆಮಂತ್ರಣ ಪತ್ರಿಕೆಯಲ್ಲೇ ಮುದ್ರಿಸಿ ಗೌರವ ಸಮರ್ಪಿಸಿದ್ದು ವಿಶೇಷವಾಗಿತ್ತು.

ತಿಳಿ ಗುಲಾಬಿ ಬಣ್ಣದ ಬಟ್ಟೆ ಬಳಸಿ ವೇದಿಕೆ ನಿರ್ಮಿಸಲಾಗಿತ್ತು. ವೇದಿಕೆಯಲ್ಲಿ ಗುಲಾಬಿ ಬಣ್ಣದ ಪುಷ್ಪಗುಚ್ಛಗಳನ್ನು ಇರಿಸಲಾಗಿ-ತ್ತು. ಕಾರ್ಯಕ್ರಮಕ್ಕೆ ಪೊಲೀಸ್ ಬ್ಯಾಂಡ್ ವಿಶೇಷ ಮೆರುಗು ನೀಡಿತು. ಇಲಾಖೆಯಿಂದ ಮಹಿಳೆಯರಿಗೆ ಉಪಾಹಾರದ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ, ಡಿವೈಎಸ್‌ಪಿ ಶಾಂತವೀರ, ಡಿಎ-ಆರ್ ಡಿವೈ?ಎಸ್‌ಪಿ ಘೋಡಕೆ ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

ಕೇಂದ್ರೀಯ ವಿದ್ಯಾಲಯ ಎಳರಾಗಿ (r), ಸಿಂಧನೂರು-584128 ಸಂದರ್ಶನ ಪ್ರಕಟಣೆ / WALK-IN-INTERVIEW ಶೈಕ್ಷಣಿಕ ವರ್ಷ 2026-27ರ ಅರೆಕಾಲಿಕ ಗುತ್ತಿಗೆ ಆಧಾರದ ಮೇಲೆ ಶಿಕ್ಷಕರಿಗಾಗಿ ಅಭ್ಯರ್ಥಿಗಳ ಪ್ಯಾನೆಲನ್ನು ಸಿದ್ಧಪಡಿಸಲು ಕೆಳಗಿನ ಹುದ್ದೆಗಳಿಗೆ 13-03-2026 ರಂದು ನೇರ ಸಂದರ್ಶನವನ್ನು ನಡೆಸಲಾಗುತ್ತದೆ. 1) ಪ್ರಾಥಮಿಕ ಶಿಕ್ಷಕರು ; ಹಿಂದಿ, ಇಂಗ್ಲಿಷ್, ಸಮಾಜ , ಗಣಿತ, ವಿಜ್ಞಾನ, ಇತರೆ ಹುದ್ದೆಗಳು Other Posts: ಕಂಪ್ಯೂಟರ್ ತರಬೇತುದಾರ ಸಹ 2 / Computer Instructor (Primary) cum DEO,/ ಕ್ರೀಡಾ ತರಬೇತುದಾರ Sports Coach / ವಿಶೇಷ Special Educator / 5 : Kannada Instructor / Music Coach/Staff Nurse ಅರ್ಹ ಅಭ್ಯರ್ಥಿಗಳು ಸಂಪೂರ್ಣ ಬಯೋ-ಡೇಟಾ, ಒಂದು ಸೆಟ್ ಅರ್ಹತಾ ಪ್ರಮಾಣಪತ್ರಗಳು ಮತ್ತು ಮೂಲ ಪ್ರಮಾಣಪತ್ರಗಳು ಮತ್ತು ಒಂದು ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರದೊಂದಿಗೆ ಸಂದರ್ಶನದಲ್ಲಿ ಭಾಗವಹಿಸಬಹುದು. 2) ಸಂದರ್ಶನಕ್ಕೆ ಯಾವುದೇ ಟಿಎ/ಡಿಎ/ ಅವಕಾಶವಿರುವುದಿಲ್ಲ. ವಿವರವಾದ ಮಾಹಿತಿ ಮತ್ತು ಅರ್ಜಿ ನಮೂನೆಯು https://elaragi.kvs.ac.in 3. ಈ ಹುದ್ದೆಗಳು ಸಂಪೂರ್ಣವಾಗಿ ಅರೆಕಾಲಿಕ ಗುತ್ತಿಗೆ ಆಧಾರದ ಮೇಲೆ ನೇಮಕಗೊಳ್ಳಲಿದ್ದು, ವಿದ್ಯಾಲಯದ ಆಗತ್ಯತೆಗಳಿಗೆ ಅನುಗುಣವಾಗಿ ಮತ್ತು ಕೆವಿಎಸ್ ಮಾನದಂಡಗಳ ಪ್ರಕಾರ ಮಾತ್ರ ನೇಮಕಗೊಳ್ಳಲಾಗುವುದು. ಸಂದರ್ಶನದ ದಿನಾಂಕ 13/03/2026 ಸಮಯ: 10:00 ಶಾಲಾ ಆವರಣ ಅಧಿಕೃತ ವೆಬ್ ಸೈಟ್: https://elaragi.kvs.ac.in


## ಶರಣಬಸವೇಶ್ವರ 204ನೇ ಜಾತ್ರಾ ಮಹೋತ್ಸವದ ಅಂಗವಾಗಿ ಅನ್ನದಾಸೋಹ



**ನೈಜ್ಯ ದೆಸೆ ನ್ಯೂಸ್**

**ಶರಣಬಸವೇಶ್ವರ 204ನೇ ಜಾತ್ರಾ ಮಹೋತ್ಸವದ ಅಂಗವಾಗಿ ಕಲಬುರಗಿಯ ವಿವಿಧೆಡೆ ವಿವಿಧ ಸಂಘ-ಸಂಸ್ಥೆಗಳು-ವ್ಯಾಪಾರಿಗಳು, ರಾಜಕೀಯ ಮುಖಂಡರು ಅನ್ನದಾಸೋಹ ಮಾಡಿ ತರಹೇವಾರಿ ಭಕ್ಷ್ಯಗಳನ್ನು ಉಣಬಡಿಸಿದರು. ನೀರು, ಮಜ್ಜಿಗೆ, ಶರಬತ್, ಕಲ್ಲಂಗಡಿ, ಬಾಳೆ, ದ್ರಾಕ್ಷಿ, ಖರ್ಜೂರ, ಕಬ್ಬಿನ ಹಾಲು ಇತ್ಯಾದಿಗಳ 'ದಾಸೋಹ'ವು ನೆತ್ತಿ ಸುಡುವ ಬಿಸಿನಲ್ಲಿ ಭಕ್ತರ ಮನ-ಹೊಟ್ಟೆ ಎರಡನ್ನೂ ತಣಿಸಿದವು.**

ಸರ್ದಾರ್ ಪಟೇಲ್ ವೃತ್ತದಿಂದ ಹಿಡಿದು ದೇವಸ್ಥಾನದ ತನಕ, ಅಪ್ಪ ಕೆರೆಯ ವಿಜ್ಞಾನ ಕೇಂದ್ರದಿಂದ ಗೋವಾ ಹೋಟೆಲ್ ತನಕ, ಲಾಲಗೇರಿ ಕ್ರಾಸ್‌ನಿಂದ ದೇವಸ್ಥಾನದ ತನಕ ಅಕ್ಷರಶಃ ಭಕ್ತರನ್ನು ಕರೆ-ಕರೆದು 'ದಾಸೋಹ' ಸೇವೆಗೈದರು. ಎಸ್‌ಬಿ ಟೆಂಪಲ್ ರಸ್ತೆಯ ಮೋದಿ ಹಾಸ್ಪಿಟಲ್ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಯಿತು. ಜಿಲ್ಲೆ ಅಷ್ಟೇ ಅಲ್ಲದೆ ಪಕ್ಕದ ಜಿಲ್ಲೆಗಳಿಂದಲೂ ಭಕ್ತರು ಪಾದಯಾತ್ರೆ ಮೂಲಕ ದೇಗುಲಕ್ಕೆ ಆಗಮಿಸಿದರು. ಬೆಲ್ಲ, ಅಕ್ಕಿ ಸೇರಿದಂತೆ ಧಾನ್ಯಗಳನ್ನು ದಾಸೋಹಕ್ಕಾಗಿ ಅರ್ಪಿಸಿದರು.

## ಶರಣಬಸವೇಶ್ವರ ರಥೋತ್ಸವ ಮಹೋತ್ಸವ

**ನೈಜ್ಯ ದೆಸೆ ನ್ಯೂಸ್**



**ಸಮೀಪದ ನವಲಹಳ್ಳಿ ಗ್ರಾಮದಲ್ಲಿ ಭಾನುವಾರ ಶರಣಬಸವೇಶ್ವರ ಜಾತ್ರಾ ಮಹೋತ್ಸವ ಮತ್ತು 52ನೇ ವರ್ಷದ ಪುರಾಣ ಪ್ರವಚನ ಮಂಗಲೋತ್ಸವ ಹಾಗೂ ಸಂಜೆ ಮಹಾರಥೋತ್ಸವ ಜರುಗಿತು. ಬೆಳಿಗ್ಗೆ ಜಾತ್ರಾ ಮಹೋತ್ಸವ ಪ್ರಯುಕ್ತ ಶರಣಬಸವೇಶ್ವರ ಮೂರ್ತಿಗೆ ರುದ್ರಾಭಿಷೇಕ, ಈಶ್ವರ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಪೂಜಾ ಕಾರ್ಯಗಳು ನಡೆದವು. ನಂತರ ಸಕಲ ವಾದ್ಯಗಳೊಂದಿಗೆ ಮತ್ತು ಮಹಿಳೆಯರಿಂದ ಕುಂಭಕಳಸ ಮೆರವಣಿಗೆ ಮತ್ತು ಗೋಪೂರ ಕಳಸ ಪೂಜೆ, ಕಳಸಾರೋಹಣ ಜರುಗಿತು.**

ಮಧ್ಯಾಹ್ನ ಶರಬಸವೇಶ್ವರ ಕಲ್ಯಾಣ ಮಂಟಪದಲ್ಲಿ 9 ಜೋಡಿ ಸಾಮೂಹಿಕ ವಿವಾಹ ಮತ್ತು ವಿವಿಧ ದಾರ್ಮಿಕ ಕಾರ್ಯಕ್ರಮಗಳು ನಡೆದವು. ಕುಷ್ಟಗಿ ಮದ್ದಾನಿಮಠದ ಕರಿಬಸವ ಶಿವಾಚಾರ್ಯರು, ಸಿದ್ದಬಸವ ಕಬೀರಾನಂದ ಸ್ವಾಮೀಜಿ, ಮಹಾಂತ ಬಸವಲಿಂಗ ಸ್ವಾಮೀಜಿ ಅವರು ವಧು-ವರರಿಗೆ ಆಶೀರ್ವಾದ ನೀಡಿದರು. ಸಂಜೆ ನಡೆದ ಮಹಾ ರಥೋತ್ಸವಕ್ಕೆ ಎಂ.ಗುಡದೂರು ಮಠದ ನೀಲಕಂಠಯ್ಯ ತಾತನವರು ಚಾಲನೆ ನೀಡಿದರು. ಮಾಜಿ ಶಾಸಕ ಕೆ.ಶರಣಪ್ಪ, ಜಿ.ಪಂ ಮಾಜಿ ಸದಸ್ಯ ಕೆ.ಮಹೇಶ, ಮೇದಮೂರ್ತಿ ಮುರಗಯ್ಯಸ್ವಾಮಿ ಹಿರೇಮಠ, ವಕೀಲರಾದ ಅಮರೇಗೌಡ ಪಾಟೀಲ, ಬಸವರಾಜ ಬಿ., ಪ್ರಮುಖರಾದ ದೊಡ್ಡನಗೌಡ ಪಾಟೀಲ, ಬಸನಗೌಡ ಎನ್.ಪಾಟೀಲ, ಬಸವರಾಜ ಬಂಡೇರ್, ಅಮರೇಗೌಡ ಸಿ.ಪಾಟೀಲ, ಪರಸಪ್ಪ ಚಿಟಗಿ, ನಿಂಗಪ್ಪ ಬಾರಕೇರ, ನಿಂಗಪ್ಪ ಗುಂಡೂರು, ವಿ.ಬಿ.ಅಂಗಡಿ, ಗ್ರಾ.ಪಂ ಮಾಜಿ ಸದಸ್ಯರಾದ ಬಸವರಾಜ ಮ್ಯಾದರಡೊಕ್ಕಿ, ದುರಗೇಶ, ಗಂಗಮ್ಮ ಇದ್ದರು.

## ಐಟಿಎಫ್ ಟೆನಿಸ್ ಪಂದ್ಯಾವಳಿಯಲ್ಲಿ ಉದಯೋನ್ಮುR ಆಟಗಾರ್ತಿ ವೈಷ್ಣವಿ ಅಡ್ಕರ್ ಚಾಂಪಿಯನ್

**ನೈಜ್ಯ ದೆಸೆ ನ್ಯೂಸ್**

**ಚಂದ್ರಶೇಖರ ಪಾಟೀಲ್ ಮೈದಾನದಲ್ಲಿ ಭಾನುವಾರ ನಡೆದ ವನಿತಾ ಐಟಿಎಫ್ ಟೆನಿಸ್ ಪಂದ್ಯಾವಳಿಯಲ್ಲಿ ಭಾರತದ ಉದಯೋನ್ಮುಖ ಆಟಗಾರ್ತಿ ವೈಷ್ಣವಿ ಅಡ್ಕರ್ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಅವರು ಸಿಂಗಲ್ಸ್ ಫೈನಲ್‌ನಲ್ಲಿ ತಾರಾ ಆಟಗಾರ್ತಿ ಅಂಕಿತಾ ರೈನಾ ವಿರುದ್ಧ 7-6 (3), 6 4 ಅಂತರದ ಜಯ ಸಾಧಿಸಿದರು.**



ಇದು ವೈಷ್ಣವಿ ಅಡ್ಕರ್‌ಗೆ ವೃತ್ತಿ ಬದುಕಿನಲ್ಲಿ ಲಭಿಸಿದ 2ನೇ ಐಟಿಎಫ್ ಸಿಂಗಲ್ಸ್ ಫೈನಲ್ ಪ್ರಶಸ್ತಿ. ಇದಕ್ಕೂ ಮುನ್ನ ಇದೇ ವರ್ಷ ಬೆಂಗಳೂರಿನಲ್ಲಿ ನಡೆದಿದ್ದ ಐಟಿಎಫ್ ಪಂದ್ಯಾವಳಿಯಲ್ಲೂ ಗೆದ್ದಿದ್ದರು. ಇದೇ ಕೂಟದ ಡಬಲ್ಸ್‌ನಲ್ಲಿ ಅಂಕಿತಾ ರೈನಾ ಮತ್ತು ವೈಷ್ಣವಿ ಅಡ್ಕರ್ ಜೋಡಿಯೇ ಪ್ರಶಸ್ತಿ ಗೆದ್ದಿತ್ತು ಎನ್ನುವುದು ವಿಶೇಷ. 33 ವರ್ಷದ ಅನುಭವಿ ಆಟಗಾರ್ತಿ ಅಂಕಿತಾ ರೈನಾ ಆರಂಭಿಕ ಸೆಟ್‌ನಲ್ಲಿ ಭರ್ಜರಿ ಪೈಪೋಟಿ ನೀಡಿದರು. ಇದಕ್ಕೆ ಸಾಕ್ಷಿಯಾಗಿ ಸೆಟ್ 7-6 (3)ಕ್ಕೆ ಸಾಗಿತು. 2ನೇ ಸೆಟ್‌ನಲ್ಲೂ ಇದೇ ರೀತಿಯ ಪೈಪೋಟಿ ಸಾಗಿ-ತಾದರೂ ಇಲ್ಲೂ ಅಡ್ಕರ್ ಮೇಲುಗೈ ಸಾಧಿಸಿದರು. ಇಬ್ಬರ ಮಧ್ಯೆ 2 ಗಂಟೆ, 14 ನಿಮಿಷಗಳ ಸೆಣಸಾಟ ಸಾಗಿತು. 21 ವರ್ಷದ ಪುಣೆ ಆಟಗಾರ್ತಿ ಅಡ್ಕರ್ ರೈನಾಗಿಂತ 12 ವರ್ಷ ಚಿಕ್ಕವರು. ಅಡ್ಕರ್‌ಗೆ 4 ಲಕ್ಷ ಬಹುಮಾನ: ಪ್ರಶಸ್ತಿ ಗೆದ್ದಿರುವ ವೈಷ್ಣವಿ ಅಡ್ಕರ್ 4.46 ಲಕ್ಷ ರೂ. ಬಹುಮಾನ ತನ್ನದಾಗಿಸಿಕೊಂಡಿದ್ದಾರೆ. ಇಲ್ಲಿ ರನ್ನರ್‌ಅಪ್ ಆಗಿರುವ ಅಂಕಿತಾ ರೈನಾ 2.42 ಲಕ್ಷ ರೂ. ಬಹುಮಾನ ಪಡೆದುಕೊಂಡಿದ್ದಾರೆ.

## ವಿಕಲಚೇತನರ ಸಮುದಾಯ ಆಧಾರಿತ ಪುನರ್ವಸತಿ "10 ಹೆಜ್ಜೆಗಳು" ತರಬೇತಿ ಶಿಬಿರ ತರಬೇತಿ ಸದುಪಯೋಗ ಪಡೆದುಕೊಳ್ಳಿ: ದೇಸಾಯಿ ದೋತರಬಂಡಿ



**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ಪಟ್ಟಣದ ಸಾಮಾರ್ಥ್ಯ ಸೌಧದಲ್ಲಿ ತಾಲೂಕು ಪಂಚಾಯಿತಿ ಮಾನ್ವಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ರಾಯಚೂರು ಮತ್ತು ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರ ಇವರ ಸಂಯುಕ್ತಾಶ್ರಯದಲ್ಲಿ ವಿಕಲಚೇತನರಿಗೆ ಹಾಗೂ ವಿಕಲಚೇತನರ ಪುನರ್ವಸತಿ ಕಾರ್ಯಕರ್ತರಿಗೆ ಸಮುದಾಯ ಆಧಾರಿತ ಪುನರ್ವಸತಿ "10 ಹೆಜ್ಜೆಗಳು" ತರಬೇತಿ ಶಿಬಿರ ಕಾರ್ಯಕ್ರಮ ನಡೆಯಿತು.**

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಂಕಲ್ಪ ವಿಕಲಚೇತನರ ಒಕ್ಕೂಟದ ಗೌರವಾಧ್ಯಕ್ಷ ದೇಸಾಯಿ ದೋತರಬಂಡಿ, ವಿಕಲಚೇತನರ ಅಭಿವೃದ್ಧಿಗೆ ಸಮುದಾಯ ಆಧಾರಿತ ಪುನರ್ವಸತಿ ಅತ್ಯಂತ ಮುಖ್ಯವಾಗಿದೆ. ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ಪಡೆದು, ಈ ತರಬೇತಿಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಯೋಜ-ಕ ಟೀಕ್ ರಾಜ್, ಡಿಡಿಆರ್‌ಸಿ ನೂಡಲ್ ಅಧಿಕಾರಿ ಹನುಮಂತ, ಸಂಕಲ್ಪ ವಿಕಲಚೇತನರ ಒಕ್ಕೂಟದ ಜಿಲ್ಲಾಧ್ಯಕ್ಷ ಶಿವಕುಮಾರ್ ಚಲ್ಮಲ್, ಜಿಲ್ಲಾ ಉಪಾಧ್ಯಕ್ಷೆ ಸಾವಿತ್ರಮ್ಮ, ಆರ್‌ಪಿಡಿ ಟಾಸ್ಕ್ ಫೋರ್ಸ್ ಸಮಿತಿ ಜಿಲ್ಲಾಧ್ಯಕ್ಷ ಎಂ.ಡಿ. ಜಾಫರ್, ಪುರಸಭೆ ನಾಮ ನಿರ್ದೇಶಿತ ಸದಸ್ಯ ವಿಜಯಕುಮಾರ ಗೌಡ,

ರಾಯಚೂರು ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತ ಅಮರೇಶ ಯಾದವ, ಮಾನ್ವಿ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತ ರಾಘವೇಂದ್ರ, ಪಿ & ಓ ಟೆಕ್ನಿಶಿಯನ್ ಆನಂದ, ಸಂಕಲ್ಪ ವಿಕಲಚೇತನರ ಒಕ್ಕೂಟದ ತಾಲೂಕು ಅಧ್ಯಕ್ಷೆ ಲಕ್ಷ್ಮೀ, ಆರ್‌ಪಿಡಿ ಟಾಸ್ಕ್ ಫೋರ್ಸ್ ಸಮಿತಿ ತಾಲೂಕು ಅಧ್ಯಕ್ಷ ಹನುಮೇಶ ಕಾತರಿಕಿ ಸೇರಿದಂತೆ ವಿಕಲಚೇತನ ಮುಖಂಡರು ಹಾಗೂ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಉಪಸ್ಥಿತರಿದ್ದರು.

## ದ್ವಿತೀಯ ಪಿಯುಸಿ ಪರೀಕ್ಷೆ; 466 ವಿದ್ಯಾರ್ಥಿಗಳು ಗೈರು ಹಾಜರಿ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯಿಂದ 2026ರ ಮಾರ್ಚ್ 09ರ ಸೋಮವಾರ ದಂದು ನಡೆದ ದ್ವಿತೀಯ ಪಿಯುಸಿ-01ರ ಶಿಕ್ಷಣ, ರಸಾಯಶಾಸ್ತ್ರ ಹಾಗೂ ಬೇಸಿಕ್ ಗಣಿತ ವಿಷಯದ ಪರೀಕ್ಷೆಯಲ್ಲಿ ಒಟ್ಟು 466 ವಿದ್ಯಾರ್ಥಿಗಳು ಗೈರು ಹಾಜ-ರಿಯಾಗಿದ್ದಾರೆ.**




ಜಿಲ್ಲೆಯ 43 ಪರೀಕ್ಷೆ ಕೇಂದ್ರಗಳಲ್ಲಿ ಶಿಕ್ಷಣ ವಿಷಯದಲ್ಲಿ ಒಟ್ಟು 2,454 ವಿದ್ಯಾರ್ಥಿಗಳು ನೋಂದಣೆಯಾಗಿದ್ದು, 2,102 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಿಯಾಗಿದ್ದಾರೆ. 352 ವಿದ್ಯಾರ್ಥಿಗಳು ಗೈರು ಹಾಜರಿಯಾಗಿದ್ದಾರೆ. ರಸಾಯಶಾಸ್ತ್ರ ವಿಷಯದಲ್ಲಿ ಒಟ್ಟು 5,884 ವಿದ್ಯಾರ್ಥಿಗಳು ನೋಂದಣೆಯಾಗಿದ್ದು, 5,771 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಿಯಾಗಿದ್ದಾರೆ.

113 ವಿದ್ಯಾರ್ಥಿಗಳು ಗೈರು ಹಾಜ-ರಿಯಾಗಿದ್ದಾರೆ. ಅಲ್ಲದೆ ಬೇಸಿಕ್ ಗಣಿತ ವಿಷಯದಲ್ಲಿ ಒಟ್ಟು 4 ವಿದ್ಯಾರ್ಥಿಗಳು ನೋಂದಣೆಯಾಗಿದ್ದು, 3 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಿಯಾಗಿದ್ದಾರೆ. ಒಬ್ಬ ವಿದ್ಯಾರ್ಥಿ ಪರೀಕ್ಷೆಗೆ ಗೈರು ಹಾಜರಿಯಾಗಿದ್ದಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಭಾರಿ ಉಪನಿರ್ದೇಶಕರಾದ ಸೋಮಶೇಖರಪ್ಪ ಹೋಕ್ರಾಣಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದು ಸೌಹಾರ್ದ ಇಫ್ತಾರ ಕೂಟ ಕಾರ್ಯಕ್ರಮ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ಪವಿತ್ರ ರಮಜಾನ್ ಮಾಸದ ಪ್ರಯುಕ್ತ ಜಮಾತೆ ಇಸ್ಲಾಮಿ ಹಿಂದ್ ನಗರ ಶಾಖೆಯ ವತಿಯಿಂದ ಸರ್ವಧರ್ಮಿಯರಿಗಾಗಿ ಹಮ್ಮಿಕೊಂಡ ಸೌಹಾರ್ದ ಇಫ್ತಾರ ಕೂಟ ಕಾರ್ಯಕ್ರಮ ಇಂದು(ಮಾ.10) ನಡೆಯಲಿದೆ. ಪಟ್ಟಣದ ಕತ್ರಿ ಬಜಾರ್ ಹತ್ತಿರ ಇರುವ ಜಾಮಿಯಾ ಮಸೀದಿಯಲ್ಲಿ ಸಂಜೆ 5-15 ಘಂಟೆಗೆ ನಡೆಯಲಿರುವ ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ಖಾಸ್ಗತೇಶ್ವರ ಮಠದ ಬಾಲ ಶಿವಯೋಗಿ ಪೂಜ್ಯ ಶ್ರೀ ಸಿದ್ದಲಿಂಗದೇವರು, ಕೊಡೆಕಲ್ ದುರುದುಂಡೇಶ್ವರ ವಿರಕ್ತ ಮಠದ ಪೂಜ್ಯಶ್ರೀ ಶಿವಕುಮಾರ ಮಹಾಸ್ವಾಮಿಗಳು ಹಾಗೂ ಮುಸ್ಲಿಂ ಧಾರ್ಮಿಕ ಮುಖಂಡ ಸೈಯದ್ ಶಕೀಲ್ ಅಹ್ಮದ್ ಖಾಜಿ ವಹಿಸುವರು.**

ಖ್ಯಾತ ಪ್ರವಚನಕಾರರಾದ ಜನಾಬ ಲಾಲಹುಸೇನ ಕಂದಗಲ್ ವಿಶೇಷ ಉಪನ್ಯಾಸ ನೀಡುವರು. ಮುಖ್ಯ ಅತಿಥಿಗಳಾಗಿ ಅಸ್ಕಿ ಫೌಂಡೇಶನ್ ಕೊಣ್ಣೂರದ ಅಧ್ಯಕ್ಷ, ಸಮಾಜ ಸೇವಕರಾದ ಸಿ.ಬಿ.ಅಸ್ಕಿ, ಮುದ್ದೇಬಿಹಾಳ ಸಿಪಿಐ ಮೊಹಮ್ಮದ್ ಫಸಿಯುದ್ದೀನ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿ ಆರ್.ಬಿ.ದಮ್ಮೂರಮಠ ಅವರು ಆಗಮಿಸಲಿದ್ದಾರೆ. ಸದರಿ ಕಾರ್ಯಕ್ರಮದಲ್ಲಿ ಪಟ್ಟಣದ ಸರ್ವಸಮಾಜದ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಜಮಾತೆ ಇಸ್ಲಾಮೀ ಹಿಂದ್ ನಗರ ಶಾಖೆಯ ಅಧ್ಯಕ್ಷ ಮುಜಾಹೀದ ನಮಾಜಕಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕರ್ನಾಟಕ ವಿಧಾನ ಪರಿಷತ್ತಿನ ಆಡಳಿತ ಪಕ್ಷದ ಮುಖ್ಯ ಸಂಚೇತಕರಾದ ಶ್ರೀ ಸಲೀಂ ಅಹಮದ್ ಅವರಿಗೆ ಸ್ವಾಗತ-ಖಾಲಿದ್ ಖಾದ್ರಿ ಕುಟುಂಬಕ್ಕೆ ಸಂತಾಪ



**ನೈಜ್ಯ ದೆಸೆ ನ್ಯೂಸ್**

**ಮಾನವಿ: ಕರ್ನಾಟಕ ವಿಧಾನ ಪರಿಷತ್ತಿನ ಆಡಳಿತ ಪಕ್ಷದ ಮುಖ್ಯ ಸಂಚೇತಕರಾದ ಶ್ರೀ ಸಲೀಂ ಅಹಮದ್ ಅವರು ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷರಾದ ಎಸ್. ಫಯಾಜೊದ್ದಿನ್ ಹಾಗೂ ಸತ್ತರ್ ಬಂಗ್ಲೆವಾಲೆ ಅವರ ಆತ್ಮೀಯ ಸ್ವಾಗತವನ್ನು ಸ್ವೀಕರಿಸಿದರು.**

ನಂತರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾದ ಸೈಯದ್ ಖಾಲಿದ್ ಖಾದ್ರಿ ಅವರ ನಿವಾಸಕ್ಕೆ ಭೇಟಿ ನೀಡಿದ ಶ್ರೀ ಸಲೀಂ ಅಹಮದ್ ಅವರು, ಖಾಲಿದ್ ಖಾದ್ರಿ ಅವರ ತಂದೆಯವರ ನಿಧನದ ವಿಚಾರ ತಿಳಿದು ಕುಟುಂಬದ ಸದಸ್ಯರಿಗೆ ಸಂತಾಪ ಸೂಚಿಸಿ, ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸಿದರು. ಈ ದುಃಖದ ಸಂದರ್ಭದಲ್ಲಿ ಕುಟುಂಬದವ-ರಿಗೆ ಧೈರ್ಯ ಹಾಗೂ ಸಾಂತ್ವನ ನೀಡಿದರು. ಈ ಸಂದರ್ಭದಲ್ಲಿ ಹಿರಿಯರಾದ ಹುಸೇನ್ ಪಾಷಾ ಕೊಡಲಿ, ಅಸ್ಲಾಂ ಪಾಷಾ ಸಿರವಾರ್, ರಜಾಕ್ ಉಸ್ತಾದ್, ಸೈಯದ್ ನಜರುದ್ದೀನ್ ಖಾದ್ರಿ, ರಾಜ ಸುಭಾಷ್ ಚಂದ್ರ ನಾಯಕ್, ಚಾಂದ್ ಪಾಷಾ ಗುತ್ತೇದಾರರು, ಸಲೀಂ ಪಾಷಾ ರುಮಾಲ್ ವಾಲೆ,

ಸೈಯದ್ ಉಬೇದ್ ಖಾದ್ರಿ, ಸೈಯದ್ ಮುಜ್ತಬಾ ಖಾದ್ರಿ, ಹಿದಾಯತ್ ನಾಯಕ್, ರೇವಣಸಿದ್ದಯ್ಯ ಸ್ವಾಮಿ, ಏಸಾಸ್ ಖಾದ್ರಿ, ಸೈಯದ್ ಆರೀಫ್ ಜಾಗೀರ್ದಾರ್, ಹೆಚ್.ಬಿ.ಎಂ. ಬಾಷಾ, ರಸೂಲ್ ಖುರೇಶಿ, ಸೈಯದ್ ಸಯೀದ್ ಖಾದ್ರಿ, ಅಬ್ಬು ಪಟೇಲ್, ಪಾಶು ಮಾಲ್ದಾರ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತ-ರಿದ್ದು ಮೃತರಿಗೆ ಗೌರವ ನಮನ ಸಲ್ಲಿಸಿದರು.

# ಪಪ್ಪಾಯ ಬೆಳೆದು ಲಾಭ ಗಳಿಸಿದ ಗೌಡೂರು ರೈತ


**ನೈಜ್ಯ ದೆಸೆ ನ್ಯೂಸ್**

**ಹಟ್ಟಿ: ಸಮೀಪದ ಗೌಡೂರು ಗ್ರಾಮದ ರೈತ ಬಸವರಾಜ ಉದ್ಬಾಳ 'ಥೈವಾನ್ ರೆಡ್ ಲೇಡಿ' ತಳಿಯ ಪಪ್ಪಾಯ ಬೆಳೆದು ಲಾಭ ಕಂಡುಕೊಳ್ಳುತ್ತಿದ್ದಾರೆ.4 ಎಕರೆಯಲ್ಲಿ 2,500, ಪಪ್ಪಾಯ ಸಸಿಗಳನ್ನು ಹಾಗೂ 2 ಸಾವಿರ ದಾಳಿಂಬೆ ಸಸಿಗಳನ್ನು ವಿಜಯಪುರ ಜಿಲ್ಲೆಯಿಂದ ತಂದು ನೆಟ್ಟಿದ್ದಾರೆ. ನಾಟಿಗೆ ಮುಂಚೆ ಭೂಮಿಗೆ ಸಾಕಷ್ಟು ಕೊಟ್ಟಿಗೆ ಗೊಬ್ಬರ ನೀಡಿ ಮಣ್ಣು ಹದಗೊಳಿಸಿ ನಾಟಿಗೆ ಸಿದ್ದಪಡಿಸಿಕೊಂಡು 5 ಅಡಿ ಅಂತರದಲ್ಲಿ ಸಸಿ ನಾಟಿ ಮಾಡಿದ್ದಾರೆ.**

'ಸಸಿ ಖರೀದಿ, ಹನಿ ನೀರಾವ-ರಿಗೆಂದು 4 ಲಕ್ಷ ವೆಚ್ಚ ಮಾಡಿದ್ದೇನೆ, ನಾಟಿ ಮಾಡಿ 8 ತಿಂಗಳಿಗೆ ಗಿಡಗಳು ಕಾಯಿ ಬಿಡಲು ಪ್ರಾರಂಭಿಸಿದವು. ಈಗಾಗಲೇ 50



ಟನ್ ಮಾರಾಟ ಮಾಡಿ 6 ಲಕ್ಷ ಲಾಭ ಗಳಿಕೆ ಮಾಡಿದೆ. ನಿರೀಕ್ಷಿಸಿದ್ದಕ್ಕಿಂತ ಅಧಿಕ ಆದ-ಾಯ ಕೈಗೆಟುಕುವಂತೆ ಪಪ್ಪಾಯ ಬೆಳೆ ನೀಡಿದೆ' ಎಂದು ಬಸವರಾಜ ಮಾಹಿತಿ ನೀಡಿದರು. 15 ಜಾನುವಾರಗಳನ್ನು ಸಾಕಿದ್ದು ಹೈನುಗಾರಿಕೆ ಮೈಗೂಡಿಸಿಕೊಂಡು ಬದುಕು ಕಟ್ಟಿಕೊಂಡಿದ್ದಾರೆ. ಜಮೀನಿಗೆ ಬೇಕಾದ ಗೊಬ್ಬರ ಅವುಗಳಿಂದಲೇ ಪ್ರತಿವರ್ಷ 2 ಟನ್ ಸಿಗಲಿದೆ ಎಂದರು. ಜಮೀನಿನ ಸುತ್ತಲು, 20 ಅಧಿಕ ತೆಂಗಿನ ಮರಗಳನ್ನು



ಬೆಳಸಿದ್ದಾರೆ. ಅಲ್ಲದೆ, ಸಜ್ಜೆ, ತೊಗರಿ, ಅಲಸಂದಿ, ಮೆಕ್ಕೆಜೋಳ ಬೆಳೆಗಳನ್ನು ಬೆಳೆದು ಇತರೆ ರೈತ-ರಿಗೆ ಮಾದರಿಯಾಗಿದ್ದಾರೆ ಬಸವರಾಜ.

3 ವರ್ಷ ಬಾಳಿಕೆ: ಸಸಿ ನೆಟ್ಟು ಗಿಡವಾದ ನಂತರ ಮೂರು ವರ್ಷಗಳವರೆಗೆ ಬಾಳಿಕೆ ಬರುತ್ತವೆ. ಕಾಯಿ ಕಟ್ಟಲು ಒಂದು ವರ್ಷದ ಅವಧಿ ಬೇಕು. ಆನಂತರ ಎರಡುವರೆಗೆ ಕೊಯ್ಲು ಮಾಡಬಹುದು ಎಂದು ಅವರು ತಿಳಿಸಿದರು. ಔಷಧ ಗುಣ ಹೊಂದಿರುವ ಪಪ್ಪಾಯ ಆರೋಗ್ಯಕ್ಕೆ ಉತ್ತಮ ಹಣ್ಣು ಬೇಸಿಗೆ ಮಳೆಗಾಲ, ಚಳಿಗಾಲದಲ್ಲೂ ಬೇಡಿಕೆ ಇರುವ ಹಣ್ಣು ಆಗಿದ್ದರಿಂದ ಮಾರುಕಟ್ಟೆಗೆ ತೊಂದರೆ ಇಲ್ಲ. ಬೆಳೆಗೆ ಹೆಚ್ಚಿನ ಪ್ರಮಾಣದಲ್ಲಿ ಕ್ರಿಮಿನಾಶಕ ರಾಸಾಯನಿಕ ಗೊಬ್ಬರ ಬಳಕೆಯ ಬದಲು ಸಾವಯುವ ಗೊಬ್ಬರ ಉಪಯೋಗ ಮಾಡಿದ್ದರಿಂದ ಖರ್ಚಿನ ಪ್ರಮಾಣವೂ ಕಡಿಮೆಯಾಯಿತು. ಗುಣಮಟ್ಟದ ಇಳುವರಿ ಬರಲು ಕಾರಣವಾಯಿತು ಎಂದು ಹೇಳುತ್ತಾರೆ.

ಕೊಯ್ಲು ಮಾಡಿದ ಫಲವನ್ನು ಮುಂಬೈ, ದೆಹಲಿ, ಹೈದರಾಬಾದ್, ಬೆಂಗಳೂರು, ಪುಣೆ, ಗೋವಾ, ಮಾರುಕಟ್ಟೆಗೆ ತೆಗೆದುಕೊಂಡು ಹೋಗಲಾಗುವುದು. ಅಲ್ಲಿ ಬೆಲೆ ಹೆಚ್ಚು ಸಿಗುವುದ-ರಿಂದ ಕೈತುಂಬ ಹಣ ಸಿಗಲಿದೆ ಎಂದರು. ಗೌಡೂರು ಗ್ರಾಮದ ರೈತ ಬಸವರಾಜ ಸಜ್ಜೆ ಬೆಳೆ ಬೆಳದಿರುವುದುಬಸವರಾಜ ಗೌಡೂರು, ಪಪ್ಪಾಯ ಬೆಳೆದ ರೈತನಮ್ಮ ಭಾಗದಲ್ಲಿ ವಾಣಿಜ್ಯ ಬೆಳೆಗಳ ಬಗ್ಗೆ ರೈತರಿಗೆ ಮಾಹಿತಿ ಕೊರತೆ ಇದೆ. ಸಂಬಂಧಪಟ್ಟ ಅಧಿಕಾರಿಗಳು ಮಾಹಿತಿ ನೀಡಿದರೆ ರೈತರಿಗೆ ಅನುಕೂಲವಾಗಲಿದೆ -ಹನುಮಂತ ರಾಡೋಡ್, ಕೃಷಿ ಅಧಿಕಾರಿ ಗುರುಗುಂಟಾರೈತ ಸಂಪರ್ಕ ಕೇಂದ್ರದಿಂದ ರೈತರಿಗೆ ಸಿಗಬೇಕಾದ ಎಲ್ಲ ಸೌಲಭ್ಯಗಳನ್ನು ಒದಗಿಸಲು ನಮ್ಮ ಇಲಾಖೆ ಸಿದ್ಧವಿದೆ. ಸೌಲಭ್ಯಗಳನ್ನು ಪಡೆದು ರೈತರು ಅಭಿವೃದ್ಧಿ ಹೊಂದಲಿ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಇಂಟೀರಿಯರ್ ಡೆಕೋರೇಷನ್

ಲೆದರ್ ಮತ್ತು ಫ್ಯಾಷನ್ ತಂತ್ರಜ್ಞಾನ (Leather and Fashion Technology) ಕೋರ್ಸ್ ಚರ್ಮದ ವಿನ್ಯಾಸ, ಕತ್ತರಿಸುವುದು, ಹೊಲಿಯುವುದು ಮತ್ತು ಪೂರ್ಣಗೊಳಿಸುವಿಕೆ ಸೇರಿದಂತೆ ಪಾದರಕ್ಷೆಗಳು, ಪರ್ಸ್‌ಗಳು, ಉಡುಪುಗಳು ಮತ್ತು ಪರಿಕರಗಳನ್ನು ತಯಾರಿಸುವ ಕೌಶಲ್ಯಗಳನ್ನು ಕಲಿಸುತ್ತದೆ.ಲೆದರ್ ಟೆಕ್ನಾಲಜಿ ಆನ್‌ಲೈನ್ ಕೋರ್ಸ್ ಎಂದರೆ ದೂರಶಿಕ್ಷಣ ಅಥವಾ ಆನ್‌ಲೈನ್ ವೇದಿಕೆಗಳ ಮೂಲಕ ನೀಡಲಾಗುವ ವಿಶೇಷ ತರಬೇತಿ ಕಾರ್ಯಕ್ರಮವಾಗಿದೆ. ಇದು ಚರ್ಮ (ಲೆದರ್) ಹಾಗೂ ಚರ್ಮದ ಉತ್ಪನ್ನಗಳ ವಿಜ್ಞಾನ, ಇಂಜಿನಿಯರಿಂಗ್ ಮತ್ತು ವಿನ್ಯಾಸ ಕುರಿತು ಶಿಕ್ಷಣ ನೀಡುತ್ತದೆ. ಈ ಕೋರ್ಸ್‌ನಲ್ಲಿ ಫ್ಯಾಷನ್ ಡಿಸೈನ್, ಇಂಜಿನಿಯರಿಂಗ್, ಮೆಟೀರಿಯಲ್ಸ್ ಸೈನ್ಸ್ ಮತ್ತು ರಸಾಯನಶಾಸ್ತ್ರವನ್ನು ಸಂಯೋಜಿಸಿ, ವಿದ್ಯಾರ್ಥಿಗಳನ್ನು ಲೆದರ್ ಪ್ರಾಸೆಸಿಂಗ್, ಆಭರಣಗಳು (ಅಕ್ಸೆಸರೀಸ್), ಪಾದರಕ್ಷೆಗಳು, ಅಪ್‌ಹೋಲ್ಸ್ಟ್ರಿ ಮತ್ತು ಸಂಬಂಧಿತ ಕೈಗಾರಿಕೆಗಳಲ್ಲಿ ಉದ್ಯೋಗಕ್ಕಾಗಿ ಸಿದ್ಧಗೊಳಿಸಲಾಗುತ್ತದೆ. ಲೆದರ್ ಟೆಕ್ನಾಲಜಿ ಆನ್‌ಲೈನ್ ಕೋರ್ಸ್‌ನ ಪ್ರಮುಖ ವಿಷಯಗಳು ಲೆದರ್ ಸೈನ್ಸ್‌ನ ಮೂಲಭೂತ ತತ್ವಗಳು ಲೆದರ್ ಪ್ರಾಸೆಸಿಂಗ್ ತಂತ್ರಜ್ಞಾನ ಉತ್ಪನ್ನ ವಿನ್ಯಾಸದ ಅಂಶಗಳು ಕೈಗಾರಿಕಾ ಮತ್ತು ನಿರ್ವಹಣಾ ಕೌಶಲ್ಯಗಳು. ಇದು ವೃತ್ತಿಪರ ವಿನ್ಯಾಸ, ಉತ್ಪಾದನೆ ಮತ್ತು ವಸ್ತುಗಳ ಆಯ್ಕೆಯ ಪ್ರಾಯೋಗಿಕ ಜ್ಞಾನವನ್ನು ಒದಗಿಸುತ್ತದೆ ಲೆದರ್ ಮತ್ತು ಫ್ಯಾಷನ್ ತಂತ್ರಜ್ಞಾನ ಕೋರ್ಸ್ ವಿವರಗಳು (Leather and Fashion Technology Course Details): ಕೋರ್ಸ್ ಪ್ರಕಾರಗಳು: ಡಿಪ್ಲೊಮಾ, ಬಿ.ಡೆಸ್ (B.Des), ಬಿ.ಟೆಕ್ (B.Tech) ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳು ಲಭ್ಯವಿವೆ. ಅರ್ಹತೆ: 10+2 (PUC) ಅಥವಾ ಸಂಬಂಧಿತ ಕ್ಷೇತ್ರದಲ್ಲಿ ಡಿಪ್ಲೊಮಾ. ಪ್ರಮುಖ ವಿಷಯಗಳು: ಚರ್ಮದ ವಿನ್ಯಾಸ, ಕತ್ತರಿಸುವಿಕೆ, ಹೊಲಿಗೆ ತಂತ್ರಗಳು, ವಸ್ತುಗಳ ಆಯ್ಕೆ, ಮತ್ತು ಫ್ಯಾಷನ್ ಟ್ರೆಂಡ್‌ಗಳು. ಉದ್ಯೋಗಾವಕಾಶಗಳು: ಲೆದರ್ ಡಿಸೈನರ್, ಪ್ರೊಡಕ್ಷನ್ ಮ್ಯಾನೇಜರ್, ಫ್ಯಾಷನ್ ಕನ್ಸಲ್ಟೆಂಟ್, ಮತ್ತು ಕ್ವಾಲಿಟಿ ಕಂಟ್ರೋಲರ್.

## ಜಾಜಿ ಶಿಣ ಸಂಸ್ಥೆಯ ಗುರುಕುಲ ಪದವಿಪೂರ್ವ ಕಾಲೇಜಿಗೆ ಕೀರ್ತಿ

ನೈಜ್ಯ ದೆಸೆ ನ್ಯೂಸ್

**ಜಾಜಿ ಶಿಣ ಸಂಸ್ಥೆಯ ಗುರುಕುಲ ಪದವಿಪೂರ್ವ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಸಿಎ ಫೌಂಡೇಷನ್ ಪರೀಯಲ್ಲಿ ಉತ್ತಮ ಅಂಕ ಪಡೆದು ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ. ಅರುಣಕುಮಾರ ಬಿ. 234, ಸೃಜನಾ ಎಸ್. ಕೆ. 222, ವಿಧಭ ಸಿ.221, ನವ್ಯ ಪಾಟೀಲ್ 217, ವಿನೋದ ಎನ್. 204 ಹಾಗೂ ವಿನಾಯಕ 200 ಅಂಕ ಗಳಿಸಿ ಪ್ರತಿಭೆ ಮೆರೆದಿದ್ದಾರೆ.**



ವಿದ್ಯಾರ್ಥಿಗಳ ಸಾಧನೆಗೆ ಆಡಳಿತ ಮಂಡಳಿ ನಿರ್ದೇಶಕರಾದ ಪ್ರಾಂಶುಪಾಲ ರವಿಕುಮಾರ ವಲ್ಲಂಶೆಟ್ಟಿ, ಉಪ ಪ್ರಾಂಶುಪಾಲ ಮಂಗೇಶಕುಮಾರ ಖಡ್ಕೆ, ವಾಣಿಜ್ಯ ವಿಭಾಗದ ಮುಖ್ಯಸ್ಥ ಸಂಜೀವ ಪಾಟೀಲ್, ಸಿಎ ಫೌಂಡೇಷನ್ ಸಂಚಾಲಕ ಸಂತೋಷ ಹಿರೇಮಠ ಹರ್ಷ ವ್ಯಕ್ತಪಡಿಸಿದ್ದಾರೆ.

## ಯುಪಿಎಸ್‌ಸಿ ಪರೀಕ್ಷೆಯಲ್ಲಿ ಕರ್ನಾಟಕದ ಯುವಕರ ಸಾಧನೆ: ರಾಜ್ಯದ ಹಲವರಿಗೆ ರ್‍ಯಾಂಕ್

# ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿದ ಯಾದಗಿರಿ ಜಿಲ್ಲೆಯಿಂದ ಯುಪಿಎಸ್‌ಸಿ ಸಾಧನೆ

ನೈಜ್ಯ ದೆಸೆ ನ್ಯೂಸ್



**ಬೆಂಗಳೂರು/ನವದೆಹಲಿ: ಕೇಂದ್ರ ಸಾರ್ವಜನಿಕ ಸೇವಾ ಆಯೋಗ (ಯುಪಿಎಸ್‌ಸಿ) ನಡೆಸಿದ ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ ಕರ್ನಾಟಕದ ಹಲವು ಯುವಕರು ಗಮನಾರ್ಹ ಸಾಧನೆ ಮಾಡಿದ್ದು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ವಿಶೇಷವಾಗಿ ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿದ ಜಿಲ್ಲೆಗಳಲ್ಲಿ ಒಂದಾಗಿ ಪರಿಗಣಿಸಲ್ಪಡುವ ಯಾದಗಿರಿ ಜಿಲ್ಲೆ ಯಿಂದ ಈ ಬಾರಿ ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ ಗಮನಾರ್ಹ ಸಾಧನೆ ಕಂಡುಬಂದಿದೆ. ಸೀಮಿತ ಸೌಲಭ್ಯಗಳು ಹಾಗೂ ಗ್ರಾಮೀಣ ಹಿನ್ನೆಲೆಯ ನಡುವೆಯೂ ಜಿಲ್ಲೆಯ ಯುವಕರು ಪರಿಶ್ರಮದಿಂದ Union Public Service Commission (ಯುಪಿಎಸ್‌ಸಿ) ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಿ ಜಿಲ್ಲೆಗೆ ಕೀರ್ತಿ ತಂದಿದ್ದಾರೆ..ಮೈಸೂರು, ಕೋಲಾರ ಸೇರಿದಂತೆ ಹಲವು ಜಿಲ್ಲೆಗಳ ಅಭ್ಯರ್ಥಿಗಳು ಉತ್ತಮ ರ್‍ಯಾಂಕ್ ಪಡೆದು ಆಡಳಿತ ಸೇವೆಗೆ ಆಯ್ಕೆಯಾಗಿದ್ದಾರೆ.**

**ಸಂದೀಪ ಬಾಡದ**

ಯಾದಗಿರಿ ನಗರದ ಗಾಂಧಿ ವೃತ್ತದ ನಿವಾಸಿ. ಕಿರಾಣಿ ಅಂಗಡಿ ನಡೆಸುತ್ತಿದ್ದ ಬಸವರಾಜಪ್ಪ ಬಾಡದ ಹಾಗೂ ಗೃಹಿಣಿ ನಿರ್ಮಲಾ ಬಸವರಾಜಪ್ಪ ಪುತ್ರ ಸಂದೀಪ ಬಾಡದ ಅವರಿಗೆ 82ನೇ ರ?ಯಾಂಕ್ ಪಡೆದಿದ್ದಾರೆ. ಪ್ರಾಥಮಿಕ ಹಂತದಿಂದ ಪಿಯುವರೆಗೆ ಶಹಾಪುರದ ಜವಾಹರ ನವೋದಯ ವಿದ್ಯಾಲಯದಲ್ಲಿ ಓದಿದರು. ಬೆಂಗಳೂರಿನ ಡಾ.ಅಂಬೇಡ್ಕರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಡಾ.ಎಐಟಿ) ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವಿ. ಯುಪಿಎಸ್‌ಸಿಯಲ್ಲಿ ಮಾನವಶಾಸ್ತ್ರ ಐಚ್ಛಿಕ ವಿಷಯವಾಗಿ ತೆಗೆದುಕೊಂಡರು. ಎಂಜಿನಿಯರಿಂಗ್ ಅಂತಿಮ ವರ್ಷದಲ್ಲಿ ಇರುವಾಗ ಯುಪಿಎಸ್‌ಸಿ ಪರೀಕ್ಷೆ ಬರೆಯಲು ಇಚ್ಛಿಸಿದೆ. ಪದವಿ ಮುಗಿಸಿ ಮೂರು ವರ್ಷ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡಿದೆ. ಕಂಪನಿಗೆ ರಾಜೀನಾಮೆ ಕೊಟ್ಟು ದೆಹಲಿಯಲ್ಲಿ ತರಬೇತಿ ಪಡೆದು ಯುಪಿಎಸ್‌ಸಿ ಪಾಸ್ ಮಾಡಿದೆ. ತವರು ಜಿಲ್ಲೆಯಲ್ಲಿ ಸೇವೆ ಸಲ್ಲಿಸುವ ಕನಸಿದೆ ಎಂದು ಸಂದೀಪ ಹೇಳಿದರು.

**ಬಸವರಾಜ ಜವಳಿ**

ಯಾದಗಿರಿ ಜಿಲ್ಲೆಯ ಶಹಾಪುರ ನಗರ ಗುತ್ತಿಪೇಟ ನಿವಾಸಿ ಬಸವರಾಜ ಜವಳಿ 664ನೇ ರ್‍ಯಾಂಕ್ ಪಡೆದಿದ್ದಾರೆ. ಜನರಲ್ ಸ್ಟೋರ್ ವ್ಯಾಪಾರ ಮಾಡುತ್ತಿರುವ ವಿಶ್ವನಾಥ ಹಾಗೂ ಗೃಹಿಣಿ ಗಿರಿಜಾ ಅವರ ಪುತ್ರ. ಯಾದಗಿರಿ ಆರ್.ವಿ ಶಾಲೆಯಲ್ಲಿ ಪೌಢಶಿಕ್ಷಣ, ಕಲಬುರಗಿ ಮಹೇಶ ವಿಜ್ಞಾನ ಕಾಲೇಜಿನಲ್ಲಿ ಪಿಯು ಹಾಗೂ ಬೆಂಗಳೂರಿನ ಬಿಎಂಎಸ್ ಕಾಲೇಜಿನಲ್ಲಿ ಸಿವಿಲ್ ಎಂಜಿನಿಯರಿಂಗ್ ಮುಗಿಸಿದರು. ಯುಪಿಎಸ್‌ಸಿಯಲ್ಲಿ ಮಾನವ ಶಾಸ್ತ್ರ ಐಚ್ಛಿಕ ವಿಷಯವಾಗಿ ತೆಗೆದುಕೊಂಡರು. ಪ್ರಭಾವಿಯೊಬ್ಬರು ಒತ್ತುವರಿ ಮಾಡಿದ್ದನ್ನು ಶಹಾಪುರ ಪುರಸಭೆಯ ಮಹಿಳಾ ಮುಖ್ಯಾಧಿಕಾರಿಯೊಬ್ಬರು ತೆರವುಗೊಳಿಸಿದರು. ಆಡಳಿತ ಶಕ್ತಿಯು ನನಗೆ ಪ್ರೇರಣೆ ನೀಡಿ, ನಾಗರಿಕ ಸೇವೆ ಎಂದರೆ ಏನು ಎಂಬುದನ್ನು ಅರ್ಥೈಸಿತು. ಅಧಿಕಾರಿಯಾದರೆ ಯಾರಿಗೂ ಹೆದರದೆ ಕೆಲಸ ಮಾಡಬಹುದು ಅನಿಸಿತು. ಮೂರು ಹುದ್ದೆ ತೊರೆದು ಮೂರು ವರ್ಷಗಳಿಂದ ಸತತವಾಗಿ ಅಭ್ಯಾಸ ಮಾಡಿದೆ ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

**ಚಂದ್ರಶೇಖರ ದೊರೆ**

880ನೇ ರ್‍ಯಾಂಕ್ ಪಡೆದಿರುವ ಚಂದ್ರಶೇಖರ ದೊರೆ ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಚೆನ್ನೂರ (ಕೆ) ಗ್ರಾಮದ ನಿವಾಸಿ. ಬಿ.ಇ ಎಲೆಕ್ಟ್ರಾನಿಕ್ & ಕಮ್ಯುನಿಕೇಷನ್ ಪದವೀಧರ. ಕೃಷಿಕ, ದಿವಂಗತ ಮಾನಶಪ್ಪ ದೊರೆ ಹಾಗೂ ಗೃಹಿಣಿ ರತ್ನಮ್ಮ ಅವರ ಪುತ್ರ. ವನದುರ್ಗದ ಸರ್ಕಾರಿ ಪ್ರೌಢಶಾಲೆ, ಕಲಬುರಗಿ ಶ್ರೀಗುರು ಪಿಯು ವಿಜ್ಞಾನ ಕಾಲೇಜು, ಬೆಂಗಳೂರಿನ ಬಿಎಂಎಸ್ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ & ಕಮ್ಯುನಿಕೇಷನ್ ಪದವಿ ಮುಗಿಸಿದರು. ಯುಪಿಎಸ್‌ಸಿಯಲ್ಲಿ ಮಾನವಶಾಸ್ತ್ರ ಐಚ್ಛಿಕ ವಿಷಯವಾಗಿತ್ತು. ಯುಪಿಎಸ್‌ಸಿ ಆಕಾಂಕ್ಷಿಗಳಿಗೆ ಕೋಚಿಂಗ್ ನೀಡುತ್ತಿದ್ದೆ. ನಮ್ಮ ಅಣ್ಣ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಮೂರು ಬಾರಿ ಸಂದರ್ಶನ ನೀಡಿದ್ದರೂ ಉತ್ತೀರ್ಣನಾಗಿರಲಿಲ್ಲ. ಅಣ್ಣನ ಕಾಳಜಿ ಹಾಗೂ ಒತ್ತಡದಿಂದ ಪ್ರೇರಣೆ ಪಡೆದು ಅಭ್ಯಾಸ ಮಾಡಿ ಕೊನೆಗೂ ಯುಪಿಎಸ್‌ಸಿಯಲ್ಲಿ ಯಶಸ್ವಿಯಾದೆ. ಎಂದು ಚಂದ್ರಶೇಖರ ಅವರು ತಮ್ಮ ಅನುಭವವನ್ನು ಹಂಚಿಕೊಂಡರು.

**ಡಾ. ನಿವೇದಿತಾ**

ವೈದ್ಯಕೀಯ ವೃತ್ತಿ ನಡುವೆ ಸಾಧನೆಗೈದ ಡಾ. ನಿವೇದಿತಾ (469ನೇ ಯಾರ್‌ಂಕ್) ಯಾದಗಿರಿ ನಗರದ ಆರೋಗ್ಯ ಇಲಾಖೆಯ ನಿವೃತ್ತ ಸಿಬ್ಬಂದಿ ಚಂದಪ್ಪ ಬಾವಿಮನಿ ಹಾಗೂ ಪಿಡಿಒ ವಿಜಯಲಕ್ಷ್ಮಿ ಬಾವಿಮನಿ ದಂಪತಿ ಪುತ್ರಿ 3. ನಿವೇದಿತಾ ಅವರು ಎರಡನೇ ಪ್ರಯತ್ನದಲ್ಲೇ 469ನೇ ಯಾರ್‌ಂಕ್ ಪಡೆದಿದ್ದಾರೆ. ಎಂಬಿಬಿಎಸ್ ಪದವೀಧರೆಯಾಗಿರುವ ಇವರು ದೋಕಾ ಜೈನ್ ಹಾಗೂ ಆರ್‌ವಿ ವಿದ್ಯಾಸಂಸ್ಥೆಯಲ್ಲಿ ಶಿಕ್ಷಣ ಪಡೆದಿದ್ದರು. ಆಡಳಿತ ಸೇವೆಯ ಮೂಲಕ ಸಮಾಜ ಸೇವೆ ಮಾಡುವ ಉದ್ದೇಶ ಇವರದ್ದಾಗಿದೆ.

**ಕೆ.ಎಲ್. ಸೂರಜ್**

ಮೈಸೂರಿನ ಸಿದ್ಧಾರ್ಥನಗರದ ಕೆ.ಎಲ್. ಸೂರಜ್ ಅವರು ಯುಪಿಎಸ್‌ಸಿ ಪರೀಕ್ಷೆಯಲ್ಲಿ 525ನೇ ರ್‍ಯಾಂಕ್ ಪಡೆದಿದ್ದಾರೆ. ಇದು ಅವರ ನಾಲ್ಕನೇ ಪ್ರಯತ್ನದ ಯಶಸ್ಸು. 3ನೇ ಪ್ರಯತ್ನದಲ್ಲಿ 713ನೇ ರ?ಯಾಂಕ್ ಗಳಿಸಿ, ಕರ್ನಾಟಕ ಕೇಡರ್‌ನಲ್ಲೇ ಐಪಿಎಸ್ ಆಗಿ ಆಯ್ಕೆಯಾಗಿದ್ದರು. ರೈತ ಜಿ.ಕೆ. ಸೋಮಶೇಖರ್?ತೀರ್ಥಾವತಿ ದಂಪತಿಯ ಪುತ್ರರಾದ ಅವರು ಹೊಳೆನರಸೀಪುರ ತಾಲ್ಲೂಕಿನ ಮಾವಿನಕೆರೆ ನವೋದಯ ಶಾಲೆಯಲ್ಲಿ 6ನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗೆ ವ್ಯಾಸಂಗ ಮಾಡಿದ್ದಾರೆ. ಮಂಗಳೂರಿನ ಸುರತ್ಕಲ್‌ನ ಎನ್‌ಐಟಿಕೆಯಲ್ಲಿ ಬಿ.ಟೆಕ್ ಪದವಿ ಮುಗಿಸಿ ಕ್ಯಾಂಪಸ್ ಆಯ್ಕೆ ಆಗಿದ್ದರೂ, ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸುವ ಸಲುವಾಗಿ ಕೆಲಸಕ್ಕೆ ಹೋಗಿರಲಿಲ್ಲ. 'ಕೋಚಿಂಗ್ ಸೆಂಟರ್‌ನಿಂದ ತರಬೇತಿ ಪಡೆಯದೇ, ಬಾಡಿಗೆಗೆ ರೂಂ ಮಾಡಿಕೊಂಡು ಗ್ರಂಥಾಲಯದ ಪುಸ್ತಕಗಳನ್ನು ಓದಿ ರ್‍ಯಾಂಕ್ ಪಡೆದಿದ್ದಾನೆ'

**ಅನಿರುದ್ಧ ಕಟ್ಟಿಮನಿ**

ಬಳ್ಳಾರಿಯ ಅನಿರುದ್ಧ ಕಟ್ಟಿಮನಿ ಅವರು ಯುಪಿಎಸ್‌ಸಿ ಪರೀಕ್ಷೆಯಲ್ಲಿ 786ನೇ ರ?ಯಾಂಕ್ ಗಳಿಸಿದ್ದಾರೆ. ತಂದೆ ಪುರುಷೋತ್ತಮ್ ಜೆಸ್ಕಾಂನಲ್ಲಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್. ತಾಯಿ ನಾಗಮಣಿ ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ ಮುಖ್ಯ ವ್ಯವಸ್ಥಾಪಕರಾಗಿ ಸ್ವಯಂ ನಿವೃತ್ತಿ ಪಡೆದಿದ್ದಾರೆ. ಬಳ್ಳಾರಿಯ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿಯಾದ ಅನಿರುದ್ಧ ಐಐಟಿ ಮದ್ರಾಸ್‌ನಿಂದ ಭೌತಶಾಸ್ತ್ರದಲ್ಲಿ ಬಿ.ಟೆಕ್ ಪದವಿ ಪಡೆದಿದ್ದಾರೆ. 2023ರಲ್ಲಿ ತಮ್ಮ ಮೊದಲ ಪ್ರಯತ್ನದಲ್ಲೇ ಐಎಫ್‌ಎಸ್ ಪಾಸು ಮಾಡಿದರು. ಸದ್ಯ ಡೆಹ್ರಾಡೂನ್‌ನ ಇಂದಿರಾಗಾಂಧಿ ರಾಷ್ಟ್ರೀಯ ಅರಣ್ಯ ಪ್ರತಿಷ್ಠಾನದಲ್ಲಿ ತರಬೇತಿ ಯಲ್ಲಿದ್ದಾರೆ. ತಮ್ಮ ಮೂರನೇ ಪ್ರಯತ್ನದಲ್ಲಿ ಅವರು ನಾಗರಿಕ ಸೇವಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. 'ಐಎಎಸ್ ಅಧಿಕಾರಿ ಆಗಬೇಕು ಎಂಬ ಉದ್ದೇಶದಿಂದಲೇ ನಾನು ಸಿವಿಲ್ಸ್ ಪರೀಕ್ಷೆ ಬರೆದಿದ್ದೆ. ಇನ್ನೂ ಉನ್ನತ ರ್‍ಯಾಂಕ್ ಪಡೆಯುವ ಉದ್ದೇಶವಿತ್ತು ಎಂದರು.

**ಎ.ಮಧು** ಕೋಲಾರ ತಾಲ್ಲೂಕು ಇರಗಸಂದ್ರದ ನಿವಾಸಿ ಎ.ಮಧು ಅವರು 436ನೇ ರ್‍ಯಾಂಕ್ ಪಡೆದ್ದಾರೆ. ಕಳೆದ ಬಾರಿ 544ನೇ ರ್‍ಯಾಂಕ್ ಪಡೆದಿದ್ದ ಮಧು ಈ ಬಾರಿ ಮತ್ತೆ ಪರೀಕ್ಷೆ ಬರೆದು ಫಲಿತಾಂಶ ಸುಧಾರಿಸಿಕೊಂಡಿದ್ದಾರೆ. ಆರನೇ ಪ್ರಯತ್ನದಲ್ಲಿ ಈ ಸಾಧನೆ ಮಾಡಿದ್ದಾರೆ. ಪೋಷಕರಾದ ಆನಂದ್ ಗೌಡ ಹಾಗೂ ಸುಶೀಲಮ್ಮ ಕೃಷಿಕರು. ತರಕಾರಿ ಬೆಳೆದು ಜೀವನ ಸಾಗಿಸುತ್ತಿದ್ದಾರೆ. ಚಿಕ್ಕಬಳ್ಳಾಪುರದಲ್ಲಿ ಕಾಲೇಜು ಮುಗಿಸಿ ನಂತರ ಬೆಂಗಳೂರಿನ ಜಿಕೆವಿಕೆಯಲ್ಲಿ ಬಿ.ಎಸ್ಸಿ(ಕೃಷಿ) ಓದಿದ್ದಾರೆ

**ಆರ್.ಧನಂಜಯ** ನಾಗಮಂಗಲ ತಾಲ್ಲೂಕಿನ ಆರ್. ಧನಂಜಯ ಯುಪಿಎಸ್ಸಿ ಪರೀಕ್ಷೆಯಲ್ಲಿ 554ನೇ ರ?ಯಾಂಕ್ ಪಡೆದಿದ್ದಾರೆ.ಇವರು ಕರಡಹಳ್ಳಿಯ ರೈತ ರಾಮಚಂದ್ರ ಮಂಗಳಮ್ಮ ದಂಪತಿಯ ಮಗ. ಕರಡಹಳ್ಳಿ ಸರ್ಕಾರಿ ಶಾಲೆಯಲ್ಲಿ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ, ಬಳಿಕ ಮೈಸೂರಿನ ನೌಕಿಸ್ ಪಿಯು ಅಕಾಡೆಮಿ ಯಲ್ಲಿ ಪಿಯುಸಿ, ಮಂಡ್ಯ ಪಿಇಎಸ್ ಕಾಲೇಜಿನಲ್ಲಿ ಬಿಎಸ್ಸಿ ಪದವಿ ಪಡೆದಿದ್ದಾರೆ.

'ಏಳು ವರ್ಷಗಳಲ್ಲಿ 3 ಬಾರಿ ಸಂದರ್ಶನ ಎದುರಿಸಿದ್ದರೂ ಆಯ್ಕೆಯಾಗಿರಲಿಲ್ಲ. ಇದು ಕೊನೆಯ ಅವಕಾಶ ಎಂದು ಭಾವಿಸಿದ್ದೆ. ಆಯ್ಕೆಯಾಗಿದ್ದೇನೆ. ಭಾಷೆಯ ಬಗ್ಗೆ ಭಯ ಬೇಡ. ಸಂದರ್ಶನ ಎದುರಿಸುವಾಗ ಇಂಗ್ಲಿಷ್, ಹಿಂದಿ ಕಷ್ಟವಾಗುತ್ತದೆಂಬುದು ಸುಳ್ಳು' ಎಂದು ತಿಳಿಸಿದರು. 'ದಿನಕ್ಕೆ 10–12 ಗಂಟೆ ಸತತ ಅಭ್ಯಾಸ ಮಾಡುತ್ತಿದ್ದೆ. ಹಿರಿಯರ ಮಾರ್ಗದರ್ಶನ, ಯೂಟ್ಯೂಬ್ ವಿಡಿಯೊಗಳು ಸಹಕಾರಿಯಾದವು'. ತಂದೆ ಹಸು ಸಾಕಿ ಓದಿಗೆ ಬೆಂಗಾವಲಾದರು. ತಮ್ಮ ಎಂ.ಕಾಂ ಮುಗಿಸಿ ನೆರವಾದ. ಡಿ.ಕೆ ರವಿ ಅವರೇ ಸ್ಫೂರ್ತಿ' ಎಂದರು.

**ಕೃಪಾ ಜೈನ್** ಹುಬ್ಬಳ್ಳಿಯ ಕೃಪಾ ಜೈನ್ ಅವರು ಯುಪಿಎಸ್‌ಸಿ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ 190ನೇ ರ?ಯಾಂಕ್ ಪಡೆದು ಐಪಿಎಸ್ ಅಧಿಕಾರಿಯಾಗಿ ಆಯ್ಕೆ ಆಗಿದ್ದಾರೆ. ಈ ಹಿಂದೆ ಇವರು 440ನೇ ರ್‍ಯಾಂಕ್ (ಐಆರ್‌ಎಂಎಸ್) ಹಾಗೂ ಐಎಫ್‌ಎಸ್ ಪರೀಕ್ಷೆಯಲ್ಲಿ 18ನೇ ರ್‍ಯಾಂಕ್ ಗಳಿಸಿದ್ದರು. ಉನ್ನತ ರ್‍ಯಾಂಕ್ ಗಳಿಸುವ ಮಹತ್ವಾಕಾಂಕ್ಷೆಯಿಂದ ಮತ್ತೊಮ್ಮೆ ಪರೀಕ್ಷೆ ಬರೆದಿದ್ದರು. ಇದೀಗ ಐದನೇ ಪ್ರಯತ್ನದಲ್ಲಿ ಐಪಿಎಸ್ ಆಗಿ ಆಯ್ಕೆಯಾಗಿದ್ದಾರೆ. ಸದ್ಯ ಡೆಹ್ರಾಡೂನ್‌ನಲ್ಲಿ ಐಎಫ್‌ಎಸ್ ತರಬೇತಿ ಪಡೆಯುತ್ತಿದ್ದಾರೆ.

ಇಂದಿರಾ ಮತ್ತು ಉದ್ಯಮಿ ಅಭಯ್ ಪಾರ್ಲೆಚಾ ದಂಪತಿ ಪುತ್ರಿ ಕೃಪಾ, ದ್ವಿತೀಯ ಪಿಯುವರೆಗೆ ಹುಬ್ಬಳ್ಳಿಯಲ್ಲೇ ಶಿಕ್ಷಣ ಪಡೆದಿದ್ದಾರೆ. ಬೆಂಗಳೂರಿನ ಆರ್.ವಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಬಿ.ಇ. ಪದವಿ ಪೂರೈಸಿದ್ದಾರೆ. ಬಿ.ಇ. ಓದುವಾಗ ನಾಗರಿಕ ಸೇವೆ ಕಡೆಗೆ ಆಸಕ್ತಿ ಬೆಳೆಸಿಕೊಂಡ ಅವರು, ದೆಹಲಿಗೆ ತೆರಳಿ ತಜ್ಞರ ಸಲಹೆ ಪಡೆದು ಅಧ್ಯಯನ ಮಾಡಿದ್ದಾರೆ.

**ಎಂ.ಎಸ್.ಉಲ್ಲಾಸ್** ಕೋಲಾರ ತಾಲ್ಲುಕಿನ ಮೇಡಿತಂಬಹಳ್ಳಿ ನಿವಾಸಿ ಎಂ.ಎಸ್.ಉಲ್ಲಾಸ್ ಅವರು 556ನೇ ರ?ಯಾಂಕ್ ಗಳಿಸಿ ಸಾಧನೆ ಮಾಡಿದ್ದಾರೆ. ಪಿಎಲ್‌ಡಿ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಎಂ.ಎಚ್.ಶ್ರೀನಿವಾಸ್ ಮತ್ತು ವಿಟ್ಟಪ್ಪನಹಳ್ಳಿ ಸರ್ಕಾರಿ ಶಾಲಾ ಶಿಕ್ಷಕಿ ಸುಜಾತಾ ದಂಪತಿ ಪುತ್ರ. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ನಗರದ ಚಿನ್ಮಯ ವಿದ್ಯಾಲಯದಲ್ಲಿ ಮಾಡಿದ್ದಾರೆ. ನಗರದ ಸಹ್ಯಾದ್ರಿ ಕಾಲೇಜಿನಲ್ಲಿ ಕಾಲೇಜು ಶಿಕ್ಷಣ ಮತ್ತು ಸುರತ್ಕಲ್‌ನ ಎನ್‌ಐಟಿಕೆಯಿಂದ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ.

**ವೈ. ಚಂದನ್** ಬೆಂಗಳೂರು: ಸಿಂಗನಾಯಕನಹಳ್ಳಿ ನಿವಾಸಿ, ವಿ.ಯಲ್ಲಪ್ಪ ಮತ್ತು ಮಂಜುಳಾ ಅವರ ಪುತ್ರ. ಬೆಂಗಳೂರಿನ ಆರ್.ಟಿ.ಎನ್.ಇ.ಟಿ ಶಾಲೆಯಲ್ಲಿ ಪ್ರೌಢಶಿಕ್ಷಣ, ಮಂಗಳೂರಿನ ಎಕ್ಸಲೆಂಟ್ ಪಿಯು ಕಾಲೇಜಿನಲ್ಲಿ ಪಿಯು ಶಿಕ್ಷಣ. ಯುಪಿಎಸ್‌ಸಿಯಲ್ಲಿ ಕೃಷಿ ಐಚ್ಛಿಕ ವಿಷಯವಾಗಿ ತೆಗೆದುಕೊಂಡಿದ್ದರು. ಯುಪಿಎಸ್‌ಸಿ ಪರೀಕ್ಷೆಯಲ್ಲಿ 661ನೇ ರ?ಯಾಂಕ್ ಪಡೆದಿದ್ದು, ಯಾವುದೇ ಕೋಚಿಂಗ್ ತರಗತಿಗೆ ಹೋಗಲಿಲ್ಲ ಎಂದು ತಿಳಿಸಿದರು.

**ವರುಣ್‌ಗೌಡ ಪಿ** ಕೋಲಾರ ತಾಲ್ಲೂಕಿನ ತ್ಯಾವನಹಳ್ಳಿ ನಿವಾಸಿ ವರುಣ್‌ಗೌಡ ಪಿ ಅವರು ಮೂರನೇ ಪ್ರಯತ್ನದಲ್ಲಿ 462ನೇ ರ?ಯಾಂಕ್ ಪಡೆದಿದ್ದಾರೆ. ಕೊಪ್ಪಳದ ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ಓದಿದ್ದಾರೆ. ಸ್ವಲ್ಪದಿನ ವೈದ್ಯಾಧಿಕಾರಿ ಆಗಿಯೇ ಸಿದ್ಧತೆ ನಡೆಸಿದರು. ಎಎಸ್‌ಐ ಪ್ರಕಾಶ್ ಆರ್. ಹಾಗೂ ಎಂ.ಪ್ರೇಮಾ ಪೋಷಕರು. 'ಕಷ್ಟಪಟ್ಟು ಓದಿದ್ದೇನೆ. ಅಪ್ಪ, ಅಮ್ಮ ಸ್ಫೂರ್ತಿದಾಯಕರಾಗಿದ್ದರು ಎಂದರು.

**ಸಾಗರ್ ಎ** ಕೋಲಾರ ತಾಲ್ಲೂಕಿನ ಶಾನುಭೋಗನಹಳ್ಳಿ ನಿವಾಸಿ ಸಾಗರ್ ಎ ಅವರು ಐದನೇ ಪ್ರಯತ್ನ ದಲ್ಲಿ 641ನೇ ರ?ಯಾಂಕ್ ಪಡೆದಿದ್ದಾರೆ. ತಂದೆ ಅಶ್ವಥಪ್ಪ ಹಾಗೂ ತಾಯಿ ಸುಶೀಲಮ್ಮ ಕೃಷಿಕರು. ಬೆಂಗಳೂರಿನ ಡಾ.ಅಂಬೇಡ್ಕರ್ ತಾಂತ್ರಿಕ ಸಂಸ್ಥೆಯಲ್ಲಿ ಬಿ.ಇ ಓದಿರುವ ಸಾಗರ್, ಸದ್ಯ ಪಿಎಸ್‌ಐ ಆಗಿ ಕೆಲಸ ಮಾಡುತ್ತಿದ್ದಾರೆ. ಈ ಯುವಕರ ಸಾಧನೆ ರಾಜ್ಯದ ಅನೇಕ ಯುಪಿಎಸ್‌ಸಿ ಆಕಾಂಕ್ಷಿಗಳಿಗೆ ಪ್ರೇರಣೆಯಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿಯೂ ಪ್ರತಿಭೆಗಳು ಹೊರಹೊಮ್ಮುತ್ತಿರುವುದಕ್ಕೆ ಇದು ಉತ್ತಮ ಉದಾಹರಣೆಯಾಗಿದೆ.

# ಮಡಿವಾಳ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರಿಸುವವರೆಗೂ ಹೋರಾಟ ನಿಲ್ಲದು :ಡಾ . ಚಂದ್ರಶೇಖರ್

ನೈಜ್ಯ ದೆಸೆ ನ್ಯೂಸ್



**ಲಿಂಗಸಗೂರು: ಕರ್ನಾಟಕ ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘ (ರಿ) ಮತ್ತು ಉತ್ತರ ಕರ್ನಾಟಕ ಮಡಿವಾಳರ ಸಂಘ (ರಿ) ಹಾಗೂ ಜಗದ್ಗುರು ಡಾ. ಶ್ರೀ ಶ್ರೀ ಬಸವ ಮಾಚಿದೇವ ಮಹಾಸ್ವಾಮಿಗಳು, ಜಗದ್ಗುರು ಶ್ರೀ ಮಾಚಿದೇವ ಮಹಾಸಂಸ್ಥಾನ ಮಠ, ಚಿತ್ರದುರ್ಗ ಶ್ರೀ ಶ್ರೀ ಮುಕ್ತಾನಂದ ಸ್ವಾಮೀಜಿ, ಶ್ರೀಕ್ಷೇತ್ರ ಕರಿಂಜೆ, ಮೂಡಬಿದ್ರೆ, ದಕ್ಷಿಣ ಕನ್ನಡ ಇವರುಗಳ ದಿವ್ಯ ಸಾನಿಧ್ಯ ಹಾಗೂ ನೇತೃತ್ವದಲ್ಲಿ ಮಾರ್ಚ್ 16 ರ ಸೋಮವಾರ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ನಮಗೆ ಸಿಗಬೇಕಾದ ಹಕ್ಕನ್ನು ಪಡೆದುಕೊಳ್ಳಲು ನಮ್ಮ (ಮಡಿವಾಳ ) ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕೆಂದು ಆಹೋರಾತ್ರಿ ಪ್ರತಿಭಟನೆಯನ್ನು ನಡೆಸುತ್ತಿದ್ದೇವೆ ಮಡಿವಾಳ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರಿಸುವವರೆಗೂ ಹೋರಾಟ ನಿಲ್ಲದು ಎಂದು ಸಮಾಜದ ಹಿರಿಯ ಮುಖಂಡ ಡಾ. ಚಂದ್ರಶೇಖರ್ ಮರಾಟದ್ ಹೇಳಿದರು.**

ಅವರು ಪತ್ರಕರ್ತರೊಂದಿಗೆ ಮಾತನಾಡುತ್ತ ಕರ್ನಾಟಕ ರಾಜ್ಯದಲ್ಲಿ ನಮ್ಮ ಸಮಾಜಕ್ಕೆ ಪರಿಶಿಷ್ಟ ಜಾತಿಗೆ ಸೇರಿಸಬೇಕೆಂಬ ಕೂಗು ಹಲವಾರು ದಶಕಗಳಿಂದ ಕೇಳಿ ಬರುತ್ತಿದೆ. ಆದರೆ ಈ ಬಗ್ಗೆ ನಮ್ಮಗೆ ಸಿಗಬೇಕಾದ ಸ್ಥಾನಮಾನವಾಗಲೀ ನಮ್ಮ ಬೇಡಿಕೆ ಈಡೇರಿಕೆಗೆ ಪ್ರಾಮಾಣಿಕ ಪ್ರಯತ್ನ ಇಲ್ಲಿಯವರೆಗೆ ಬಂದಿರುವ ಯಾವುದೇ ಸರ್ಕಾರಗಳು ಮಾಡಲೇ ಇಲ್ಲ. ನಮ್ಮ ಸಮಾಜಕ್ಕೆ ನಿಜವಾಗಿಯೂ ಸಿಗಬೇಕಾದ ಪರಿಶಿಷ್ಟ ಜಾತಿಯ ಹಕ್ಕಿನಿಂದ ನಾವು ಇಂದು ವಂಚಿತರಾಗಿದ್ದೇವೆ. ನಮಗೆ ನಿಜವಾಗಿಯೂ ಯಾವ ಹಕ್ಕು ಸಿಗಬೇಕು ಅದು ಸಿಗದೇ ಆ ಜಾಗದಲ್ಲಿ ಬಲಿಷ್ಟ ಜಾತಿಗಳು ಆಕ್ರಮಿಸಿಕೊಂಡು ನಮ್ಮ ಸಮಾಜ ಸಂಪೂರ್ಣವಾಗಿ ನಿರ್ಲಕ್ಷಿತವಾಗಿದೆ. ನಮ್ಮ ಸಮಾಜವು ಇತರೆ ಯಾವುದೇ ಸಮಾಜದವರು ಮಾಡದ ಮಲಿನ ಬಟ್ಟೆಗಳನ್ನು, ಮಲಮೂತ್ರಗಳನ್ನು ಮುಟ್ಟಿನಿಂದ ರಕ್ತಸ್ರಾವ ಮತ್ತು ಕೀವು ಮುಂತಾದ ಬಟ್ಟೆಯನ್ನು ಶುದ್ಧ ಮಾಡಲು ನಮ್ಮ ಜನಾಂಗವನ್ನು ಬಳಿಸಿಕೊಳ್ಳುತ್ತಾರೆ.

ರೋಗಿಗಳ ಬಟ್ಟೆಗಳನ್ನು, ಮರಣವಾದ ಮನೆಗಳ ಬಟ್ಟೆಗಳ ಶುದ್ದಿ ಕಾರ್ಯಗಳಲ್ಲಿ ನಮ್ಮ ಜನಾಂಗ ತೊಡಗಿ ಕೊಂಡಿದ್ದರೂ ನಮ್ಮ ಜಾತಿಯನ್ನು ಪರಿಶಿಷ್ಟ ಜಾತಿಗೆ ಸೇರಿಸಲು ಮೀನಾಮೇಷ ಮಾಡುತ್ತಿರುವುದರ ಹಿಂದೆ ರಾಜಕೀಯ ಶಡ್ಯಂತ್ರ ಇದೆ. ಈಗಾಗಲೇ ದೇಶದ 18 ರಾಜ್ಯಗಳಲ್ಲಿ 3 ಕೇಂದ್ರಾಡಳಿತ ಪ್ರದೇಶದಲ್ಲಿ ನಮ್ಮ ಜನಾಂಗವನ್ನು ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ರಾಜಕೀಯವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಮುಂದುವರಿದಿರುವುದು ಕಾಣುತ್ತದೆ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ನಮ್ಮನ್ನು ಹಿಂದುಳಿದ ವರ್ಗಕ್ಕೆ ಸೇರಿಸಿ ನಮ್ಮ ರಾಜ್ಯದಲ್ಲಿ ನಮಗೆ ಯಾವುದೇ ರೀತಿಯ ಮಾನ್ಯತೆಯನ್ನು ನೀಡದಿರುವುದು ಶೋಚನೀಯ.

1921 ನೇ ಇಸವಿಯಲ್ಲೇ ಮೈಸೂರು ಮಹಾರಾಜರು ನಡೆಸಿದ ದುಂಡು ಮೇಜಿನ ಸಭೆಯಲ್ಲಿ ರಾಜ್ಯದ ಮಡಿವಾಳ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರಿಸಲು ಆದೇಶ ಮಾಡಿರುವುದು ನಮ್ಮ ಜನಾಂಗ ಎಷ್ಟರ ಮಟ್ಟಿಗೆ ಹಿಂದುಳಿದಿದೆ ಎಂಬುದನ್ನು ಗಮನಿಸಬೇಕಾಗಿದೆ. ಕರ್ನಾಟಕ ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘವು ಸರ್ಕಾರಕ್ಕೆ ಒತ್ತಡವನ್ನು ನೀಡಿದ್ದರಿಂದ ಅಂದಿನ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪರವರು ರಾಜ್ಯದ ಮಡಿವಾಳ ಜನಾಂಗದವರ ಕಷ್ಟ ಕಾರ್ಪಣ್ಯಗಳನ್ನು ಆಲಿಸಿ ಮಡಿವಾಳ ಜನಾಂಗವನ್ನು ಪರಿಶಿಷ್ಟರ ಜಾತಿಗೆ ಸೇರಿಸಬೇಕೆ ಬೇಡವೇ ಎಂಬುದನ್ನು ಕುಲಶಾಸ್ತ್ರ ಅಧ್ಯಯನ ಮತ್ತು ಸಂಶೋಧನೆಯನ್ನು ಮಾಡಿ ವರದಿಯನ್ನೀಡಲು ಮೈಸೂರು ವಿಶ್ವ ವಿದ್ಯಾಲಯದ ಪ್ರೊಫೆಸರ್ ಡಾ. ಅನ್ನಪೂರ್ಣ ನವರನ್ನು ನೇಮಿಸಲಾಯಿತು ಇದು 2009 ರಲ್ಲಿ ಎರಡು ವರ್ಷಗಳ ಕಾಲ ಅಧ್ಯಯನವನ್ನು ನಡೆಸಿ ರಾಜ್ಯದಲ್ಲಿ ಸುಮಾರು 28 ಜಿಲ್ಲೆಗಳಿಗೆ ಖುದ್ದು ಭೇಟಿಮಾಡಿ ಜನಾಂಗದ ಮುಖಂಡರು, ವೃತ್ತಿಯಲ್ಲಿ ತೊಡಗಿಸಿಕೊಂಡವರು, ಮಡಿಕಟ್ಟೆಗಳು, ಕುಲಕಸಬನ್ನು ಮಾಡುವವುವರು ಇತ್ಯಾದಿ ಅನೇಕರನ್ನು ಭೇಟಿಮಾಡಿ ಈ ಕುಲಶಾಸ್ತ್ರ ಅಧ್ಯಯನವನ್ನು ಮಾಡಿ ವರದಿಯನ್ನು ನೀಡಿದ್ದಾರೆ . ವರದಿ ನೀಡಿದರು ಈ ವರೆಗೆ ಈ ಮಡಿವಾಳರನ್ನು ಏಕೆ ಪರಿಶಿಷ್ಟ ಜಾತಿಗೆ ಇಲ್ಲಿಯವರೆಗೆ ಸೇರಿಸಿಲ್ಲ.. ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿವಾಗಿ ಹಾಗೂ ಆರ್ಥಿಕ, ರಾಜಕೀಯವಾಗಿ ಹಿಂದುಳಿದಿರುವ ಮಡಿವಾಳ ಜಾತಿಗೆ ಮೊದಲ ಆದ್ಯತೆಯಲ್ಲಿ ಪರಿಶಿಷ್ಟ ಜಾತಿಗೆ ಸೇರಿಸಿ ಎನ್ನುವ ಕುಲಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು. ಈ ವರದಿಯನ್ನು ಸರ್ಕಾರಕ್ಕೆ 2011ರಲ್ಲಿ ಸಲ್ಲಿಸಲಾಗಿತ್ತು. ಆದ–'ರೆ ಈ ವರದಿಯನ್ನು ಇಲ್ಲಿಯವರೆಗೆ ಬಂದಿರುವ ಎಲ್ಲಾ ಸರ್ಕಾರಗಳು ಪರಿಗಣಿಸಲೇ ಇಲ್ಲ.

2022ರಲ್ಲಿ ಬಿ.ಜೆ.ಪಿ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸಚಿವರಾಗಿದ್ದ ಕೋಟಾ ಶ್ರೀನಿವಾಸ ಪೂಜರಿಯವರು ಈ ವರದಿಯನ್ನು ಸಚಿವ ಸಂಪುಟದಲ್ಲಿ ಮಂಡಿಸಲು ಸೂಚಿಸಲಾಗಿತ್ತು. ವರದಿಯನ್ನು ವಿಧಾನ ಸಭೆಯಲ್ಲಿ ಮಂಡಿಸಬೇಕು ಎನ್ನುವಷ್ಟರಲ್ಲಿ ಚುನಾವಣೆ ಘೋಷಣೆಯಾಯಿತು. ಕುಲಶಾಸ್ತ್ರ ಅಧ್ಯಯನ ವರದಿ ಕಡತವು ಸಮಾಜ ಕಲ್ಯಾಣ ಇಲಾಖೆಯಲ್ಲಿಯೇ ಖಘಆ 505 ಖಐಕ22 ಇಂದಿಗೂ ಕೊಳೆಯುವಂತೆ ಮಾಡಿದೆ. ಈ ವರದಿಯನ್ನು ಜಾರಿಗೆ ತರಲು ನಮ್ಮ ಸಮುದಾಯದ ಡಾ. ಶ್ರೀ ಶ್ರೀ ಬಸವ ಮಾಚೀದೇವ ಸ್ವಾಮೀಜಿ, ಶ್ರೀ ಮಾಚಿದೇವ ಮಹಾಸಂಸ್ಥಾನ ಮಠ, ಚಿತ್ರದುರ್ಗ ಮತ್ತು ಕರ್ನಾಟಕ ರಾಜ್ಯ ಮಡಿವಾಳದ ಕ್ಷೇಮಾಭಿವೃದ್ಧಿ ಸಂಘ ಹಾಗೂ ಉತ್ತರ ಕರ್ನಾಟಕ ಮಡಿವಾಳರ ಸಂಘಟನೆಗಳು ಒಟ್ಟುಗೂಡಿ ರಾಜ್ಯದ 224 ಶಾಸಕರನ್ನು ಖುದ್ದು ಭೇಟಿ ಮಾಡಿ ಮನವಿಯನ್ನು ಮಾಡಲಾಗಿದೆ. ಕರ್ನಾಟಕ ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಉತ್ತರ ಕರ್ನಾಟಕ ಮಡಿವಾಳರ ಸಂಘಟನೆ ಗಳು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ 19 ಮಂತ್ರಿಗಳು ಹಾಗೂ ರಾಜ್ಯದ 137 ಶಾಸಕರುಗಳಿಂದ ತಿಫಾರಸ್ಸು ಪತ್ರಗಳನ್ನು ಪಡೆದಿದೆ.

ಈವರೆಗೆ ಪ್ರೊಫೆಸರ್ ಡಾ. ಅನ್ಯಪೂರ್ಣ ವರದಿಯನ್ನು ಜಾರಿಗೊಳಿಸಲು ಒಟ್ಟು 156 ಶಿಫಾರಸ್ಸು ಪತ್ರಗಳನ್ನು ಪಡೆದುಕೊಂಡಿದ್ದೇವೆ. ಇದನ್ನು ಮುಖ್ಯ ಮಂತ್ರಿಗಳು ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯವರಿಗೆ ಸಲ್ಲಿಸಲಾಗಿದೆ. ಇಷ್ಟೆಲ್ಲಾ ಪ್ರಯತ್ನಗಳು ಮಾಡಿದ್ದರೂ ಸಹ ಸರ್ಕಾರ ನಮ್ಮ ಜನಾಂಗದ ಮನವಿಗಳನ್ನು ಸರಿಯಾಗಿ ಪರಿಗಣಿಸದೆ ನಮ್ಮ ಹಕ್ಕನ್ನು ಕಸಿದುಕೊಂಡಿದೆ. ನಮ್ಮ ಮಡಿವಾಳ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರಿಸುವ ವರೆಗೂ ಆಹೋರಾತ್ರಿ ಪ್ರತಿಭಟನೆ ನಡೆಸಿ ನಮ್ಮ ಹಕ್ಕನ್ನು ಪಡೆದುಕೊಳ್ಳುತ್ತೇವೆ ಎಂದು ಹೇಳಿದರು . ಈ ಸಂದರ್ಭದಲ್ಲಿ ಮಡಿವಾಳ ಸಮಾಜದ ತಾಲೂಕ ಅಧ್ಯಕ್ಷ ಅಮರೇಶ್ ಬಾಲಾಜಿ , ಪ್ರಧಾನ ಕಾರ್ಯದರ್ಶಿ ಸುರೇಶ ಮಡಿವಾಳ , ಖಜಾಂಚಿ ಅಯ್ಯಪ್ಪ ಚಿಕ್ಕೇಸರೂರು , ಡಾ. ಅಮರೇಶ್ ಮಡಿವಾಳ, ಬಸವರಾಜ್ ಕಸಬಾ ಲಿಂಗಸಗೂರು , ಅಮರೇಶ್ ಮೂಕಲಾ ದಿನ್ನಿ , ವಿಜಯ್ ಮಕಾಪುರ್ , ಶಂಕ್ರಪ್ಪ ಮಡಿವಾಳ , ಶೇಖರ್ ಮಡಿವಾಳ , ತಿರುಪತಿ ಮಡಿವಾಳ ಸೇರಿದಂತೆ ಸಮಾಜದ ಮುಖಂಡರು ಇದ್ದರು .